ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ

ನವೆಂಬರ್ 2021
ಸಂಪುಟ 17, ಸಂಚಿಕೆ 07
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com



ಮಹಿಳಾ ವಿಭಾಗದ ವತಿಯಿಂದ ದಸರಾ ಆಚರಣೆ



ದೀಪಾವಳಿ ಸಡಗರ




ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ ವತಿಯಿಂದ
ದಕ್ಷ ಯಜ್ಞ ಯಕ್ಷಗಾನ

**ದೀಪಾವಳಿ ಹಬ್ಬದ ಹಾಗೂ**
**ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು**


PRIME CASTLE'S
Neighbourhood
LUXURY APARTMENT
Elite
Arkavathy Layout, Sampigehalli, BENGALURU
APPROVED
RERA
APPROVED
JUST PAY 1 Lakhs *
VS BUILDER
VIVA MARINA
Adi Udupi, on Malpe Road, UDUPI
Budget Flats
30 Lakhs * Onwards
ROYAL RICH
Kalkere, Bengaluru
NIKITHA PARADISE
Banjara Layout, Bengaluru
BEST INVESTMENT WITH ASSURED RENTAL RETURN
www.theprimecastle.com
+91 98456 71100
+91 98450 90689
No. 982, HBR Layout, 1st Stage, 2nd Block,
80th feet Road, Bangalore 560045
info@theprimecastle.com

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 17** **NOVEMBER 2021** **ISSUE 07**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಡಾ॥ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

– ಸಂಪಾದಕ ಮಂಡಳಿ

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಕರ್ನಾಟಕ ರಾಜ್ಯೋತ್ಸವ – ಏಕೀಕೃತ ಕರ್ನಾಟಕ ರಾಜ್ಯದ ಶುಭಾರಂಭ | 5 |
| 5. | ಬಂಟರ ಸಂಘ ಬೆಂಗಳೂರು – ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ..... | 9 |
| 6. | ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ ಪ್ರತಿಭಾ ಪುರಸ್ಕಾರ ಹಾಗೂ ದತ್ತಿ ನಿಧಿ ಪ್ರಶಸ್ತಿ ವಿತರಣೆ | 11 |
| 7. | ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ | 13 |
| 8. | ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ – 2021–22 | 15 |
| 9. | ಆಧುನಿಕತೆಯ ಪ್ರಭಾವ ಮತ್ತು ಪರಿಣಾಮಗಳು | 18 |
| 10. | Blessings in Disguise on Bunts from.... | 27 |
| 11. | ಕೊಂಕು ಜೀವಿಯ ಮೆಲುಕು–2 | 30 |
| 12. | ವಿಧಿಯೆಂಬ ಮಹಾಶಕ್ತಿಯನ್ನು | 32 |
| 13. | ಮಹಿಳಾ ವಿಭಾಗ ಸಾದರ ಪಡಿಸಿದ | 34 |

**ಮುಖಪುಟ**

**ಮಹಿಳಾ ವಿಭಾಗದಿಂದ ದಸರಾ ಆಚರಣೆ**

**ಯಕ್ಷಗಾನ ಸಮಿತಿ - 'ದಕ್ಷ ಯಜ್ಞ' ಯಕ್ಷಗಾನ**

**ದೀಪಾವಳಿ ಸಡಗರ**

# ಸಂಪಾದಕೀಯ



## ನಿಜವಾದ ಶ್ರೀಮಂತಿಕೆ ಎಂದರೇನು?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುವ ಮೊದಲೇ ನಡೆದ ಒಂದು ಘಟನೆ –ಹಿಂದೆ ಯಾರೋ ಹೇಳಿದ ನೆನಪು. ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದಲ್ಲಿದ್ದಾಗ ಊರೂರುಗಳಲ್ಲಿ ಜನರನ್ನು ಪ್ರೇರೇಪಿಸುವುದು, ಅರಿವು ಮೂಡಿಸುವುದು, ಸಂಘಟಿತರಾಗಲು ಹುರಿದುಂಬಿಸುವ ಕೆಲಸದಲ್ಲಿದ್ದರು. ಹಾಗೆಯೇ ಒಂದು ಊರಿಗೆ ಅವರು ಬರುವ ಕಾರ್ಯಕ್ರಮವಿತ್ತು. ಚಿಕ್ಕ ಊರು, ಹೇಳಿಕೊಳ್ಳುವಂತಹ ಕಟ್ಟಡಗಳು, ರಸ್ತೆಗಳು ಇರಲಿಲ್ಲ. ಆದರೂ ಊರಿನ ಜನರೆಲ್ಲಾ ಸೇರಿ ಗಾಂಧೀಜಿಯವರನ್ನು ಬರಮಾಡಿಕೊಳ್ಳಲು ತಯಾರಿ ನಡೆಸಿಕೊಂಡಿದ್ದರು. ಹಾಗೆಯೇ ಆ ಊರಿನ ಗಣ್ಯವ್ಯಕ್ತಿಯೋರ್ವರು ಆ ಕಾರ್ಯಕ್ರಮದ ರೂವಾರಿಯಾಗಿದ್ದರು. ಆ ವ್ಯಕ್ತಿ ಬಹಳ ಶ್ರೀಮಂತರಾಗಿದ್ದು, ನೂರಾರು ಎಕರೆ ಜಮೀನು, ತೋಟ, ಇತರ ವ್ಯವಹಾರಗಳನ್ನು ಹೊಂದಿದ್ದರು. ಅಲ್ಲದೇ ವಿದ್ಯಾವಂತರೂ ಆಗಿದ್ದರು.

ಸರಿ... ಗಾಂಧೀಜಿಯವರು ಆಗಮಿಸಿದರು, ಜನರೆಲ್ಲ ಶಿಸ್ತಿನಿಂದ ನಿಂತಿದ್ದರು, ವೇದಿಕೆಯೂ ಸಿದ್ಧವಾಗಿತ್ತು. ಈ ವಿದ್ಯಾವಂತರಾಗಿದ್ದ ನಮ್ಮ ಗಣ್ಯವ್ಯಕ್ತಿ ಸೂಟು, ಬೂಟು ಧರಿಸಿ ನಿಂತಿದ್ದರು, ಗಾಂಧೀಜಿಯವರನ್ನು ಬರಮಾಡಿಕೊಂಡರು. ಅಪ್ಪಟ ಖಾದಿ ಧರಿಸಿದ್ದ ಗಾಂಧೀಜಿಯವರು ಈ ವ್ಯಕ್ತಿಯ ಸೂಟು, ಬೂಟು ನೋಡಿದವರೇ ಒಂದು ಮಾತನ್ನು ಹೇಳಿದರು–"ಇದೆಲ್ಲಾ ನಮಗೆ ಬೇಕಾ?". ಮುಂದೆ ಕಾರ್ಯಕ್ರಮ ಮುಗಿಸಿ, ಗಾಂಧೀಜಿಯವರು ಅವರ ಮುಂದಿನ ಕೆಲಸಕ್ಕೆ ನಡೆದರು.

ಗಾಂಧೀಜಿಯವರು ಸ್ವದೇಶಿ ವಸ್ತುಗಳನ್ನೇ ಬಳಸಿ ಎಂದು ಸಾರುವ ಉದ್ದೇಶದಿಂದ ಆ ಮಾತನ್ನು ಹೇಳಿರಬಹುದು, ಅಲ್ಲದೇ ಆಗಿನ ಕಾಲಕ್ಕೆ ಆ ಮಾತು ಸರಿಯಾಗಿತ್ತು. ಏಕೆಂದರೆ ಇಂದಿನ ಜಾಗತೀಕರಣದ ದಿನಗಳಲ್ಲಿ ಸೂಟು, ಬೂಟು ಧರಿಸುವುದು ದೊಡ್ಡ ಮಾತೇನಲ್ಲ. ಆದರೆ ಅಂದು ಗಾಂಧೀಜಿಯವರಿಂದ ಪ್ರೇರೇಪಿತರಾದ ಆ ವ್ಯಕ್ತಿ ಅಂದಿನಿಂದ ತನ್ನ ಸೂಟು, ಬೂಟುಗಳನ್ನೆಲ್ಲಾ ತ್ಯಜಿಸಿ ಖಾದಿ ಧರಿಸಲಾರಂಭಿಸಿದರು. ಅಂದಿನ ಕಾಲದ ಪಾಶ್ಚಾತ್ಯ ಸಂಸ್ಕೃತಿಯಿಂದ ಬಂದ ರೀತಿ ನೀತಿಗಳನ್ನೆಲ್ಲಾ ಬದಲಾಯಿಸಿಕೊಂಡರು. ಇದು ಆ ವ್ಯಕ್ತಿಯ ದೊಡ್ಡಗುಣ. ಅಲ್ಲದೇ ಗಾಂಧೀಜಿಯವರ ಚಿಂತನೆ ಹಾಗೂ ಮಾತಿನ ಮರ್ಮದ ಫಲ. ಮುಂದೆ ಆ ವ್ಯಕ್ತಿಯೂ ಅಪ್ರತಿಮ ದಾನಿಗಳಾಗಿ ಜನಾನುರಾಗಿಯಾಗಿದ್ದರು.

ಹಾಗೆ ನೋಡಿದರೆ "ಶ್ರೀಮಂತಿಕೆ" ಎನ್ನುವುದೇ ಒಂದು ಕಠಿಣ ಪದ. ಒಬ್ಬೊಬ್ಬರಲ್ಲಿ ಒಂದೊಂದು ಅರ್ಥವನ್ನು ಇದು ತೆಗೆದುಕೊಳ್ಳುತ್ತದೆ. ಹಾಗಿದ್ದರೆ ನಿಜವಾದ ಶ್ರೀಮಂತಿಕೆ ಯಾವುದು? ಕೆಲವೇ ದಿನಗಳ ಹಿಂದೆ ಕನ್ನಡದ ಪ್ರಖ್ಯಾತ ಚಲನಚಿತ್ರ ನಟ ಶ್ರೀ ಪುನೀತ್ ರಾಜ್‌ಕುಮಾರ್ ತೀರಿಕೊಂಡರು. ಅವರ ಬಗ್ಗೆ ಸಾಕಷ್ಟು ವಿಷಯಗಳು ಅನೇಕ ಟಿವಿ ಚಾನೆಲ್‌ಗಳಲ್ಲಿ, ಜನರ ಬಾಯಲ್ಲಿ, ವಾಟ್ಸಪ್‌ನಲ್ಲಿ ಹರಿದಾಡುತ್ತಿದ್ದವು. ಅನೇಕ ಜನರಿಗೆ ಗೊತ್ತಿಲ್ಲದ ಒಂದು ವಿಷಯವೆಂದರೆ ಅವರು ಸಾವಿರಾರು ಬಡಮಕ್ಕಳಿಗೆ ಉಚಿತ ಶಿಕ್ಷಣ, ಹೆಣ್ಣು ಮಕ್ಕಳಿಗೆ ಶಿಕ್ಷಣ, ಶಾಲೆಗಳು, ಅನಾಥಾಶ್ರಮ, ವೃದ್ಧಾಶ್ರಮಗಳು, ಗೋಶಾಲೆಗಳು ಇತ್ಯಾದಿಗಳಿಗೆ ಸಹಾಯ ಮಾಡುತ್ತಿದ್ದರು. ಆದರೆ ಪ್ರಚಾರ ಬಯಸದ ವ್ಯಕ್ತಿ ಅವರಾಗಿದ್ದರು. ಇದೇ ಅಲ್ಲವೇ ನಿಜವಾದ ಶ್ರೀಮಂತಿಕೆ?

ಶ್ರೀಮಂತಿಕೆ ಎಂದರೆ ಸಾಕಷ್ಟು ಹಣ, ಸಂಪತ್ತು, ಆಸ್ತಿ ಹೊಂದಿರುವುದಲ್ಲ. ಒಳ್ಳೆಯ ಸ್ವಭಾವ, ವಿಶಾಲ ಹೃದಯ, ವಿನಯತೆ, ಶುದ್ಧ ಮನಸ್ಸು ಹೊಂದಿರುವುದೇ ಶ್ರೀಮಂತಿಕೆ. ನೀವು ಯಾರು, ಎಂತಹವರು ಎಂದು ತಿಳಿದುಕೊಳ್ಳುವುದೇ ಶ್ರೀಮಂತಿಕೆ. ಅರ್ಥಪೂರ್ಣವಾದ ಜೀವನವೆಂದರೆ ಕೇವಲ ಶ್ರೀಮಂತರಾಗಿರುವುದು, ಜನಪ್ರಿಯರಾಗಿರುವುದು, ಉನ್ನತ ಶಿಕ್ಷಣ ಹೊಂದಿರುವುದೇ ಅಲ್ಲ. ನಮ್ಮಲ್ಲಿ ಮಾನವೀಯತೆ, ನಮ್ರತೆ, ಇತರರ ಕಷ್ಟಸುಖಗಳನ್ನು ಹಂಚಿಕೊಳ್ಳುವ ಹಾಗೂ ಎಲ್ಲರ ಹೃದಯವನ್ನು ಮುಟ್ಟುವ ಮನಸ್ಸಿದ್ದರೆ ಅದು ಶ್ರೀಮಂತಿಕೆ. ಆಗ ಮಾತ್ರ ನಾವು ಸಂಪೂರ್ಣ, ಸಂತೋಷದ ಹಾಗೂ ಸಂತೃಪ್ತ ಜೀವನವನ್ನು ನಡೆಸಲು ಸಾಧ್ಯ.

**ಸರ್ವರಿಗೂ ಕನ್ನಡ ರಾಜ್ಯೋತ್ಸವದ ಹಾಗೂ ದೀಪಾವಳಿಯ ಶುಭಾಶಯಗಳು.**

**ಎಂ. ಮುರಲೀಧರ ಹೆಗ್ಡೆ**
**hegdemm@gmail.com**

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೆಲ್ಲರಿಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು.

ಸಂಘದ ವಿಶೇಷ ಮಹಾಸಭೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದ ಸದಸ್ಯ ಬಾಂಧವರೆಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ಶಾಲಾಡಳಿತ ಮಂಡಳಿಯ ಚೇರ್‌ಮೆನ್ ಡಾ. ಆರ್.ಎನ್. ಶೆಟ್ಟಿಯವರ ನಿಧನದ ನಂತರ ಚೇರ್‌ಮೆನ್ ಸ್ಥಾನಕ್ಕೆ ಹಲವಾರು ವರ್ಷಗಳಿಂದ ನಮ್ಮ ಸಮಾಜ ಹಾಗೂ ಸಂಘಕ್ಕೆ ನಿರಂತರ ಸೇವೆ ಸಲ್ಲಿಸುತ್ತಿರುವ ಹಿರಿಯ ಸದಸ್ಯರು, ಕೊಡುಗೈದಾನಿ, ಯೋಜನಾ ಸಮಿತಿಯ ಚೇರ್‌ಮೆನ್, ಎಂ.ಆರ್.ಜಿ. ಸಮೂಹ ಸಂಸ್ಥೆಗಳ ಸಂಸ್ಥಾಪಕ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರನ್ನು ಈ ಸ್ಥಾನಕ್ಕೆ ವಿಶೇಷ ಮಹಾಸಭೆಯ ಅನುಮತಿಯ ಮೇರೆಗೆ ನೇಮಕ ಮಾಡಲಾಗಿದೆ. ಶ್ರೀಯುತರು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ - II ಯೋಜನೆಗೆ ಒಂದು ಕೋಟಿ ರೂ.ಗಳ ದೇಣಿಗೆ ನೀಡಿದ್ದು, ನಮ್ಮ ಸಂಘದಂತೆಯೇ ಇತರ ಬಂಟರ ಸಂಘಗಳು ಹಾಗೂ ಸಂಘ-ಸಂಸ್ಥೆಗಳಿಗೆ ಉದಾರ ದೇಣಿಗೆ ನೀಡುವ ಮೂಲಕ ತಮ್ಮ ಸಾಮಾಜಿಕ ಕಳಕಳಿ ಮೆರೆದಿರುವು ಸ್ಮರಣೀಯ. ಶ್ರೀ ಕೆ. ಪ್ರಕಾಶ ಶೆಟ್ಟಿಯವರ ನಾಯಕತ್ವದಲ್ಲಿ ನಮ್ಮ ಶೈಕ್ಷಣಿಕ ಸಂಸ್ಥೆಯು ಇನ್ನೂ ಉನ್ನತ ದರ್ಜೆಗೇರಲಿದೆ ಎನ್ನುವುದು ನಮ್ಮೆಲ್ಲರ ಆಶಯ.

ಸುದೀರ್ಘ ಸಮಯದ ನಂತರ, ದೀಪಾವಳಿ ಸಡಗರ ಕಾರ್ಯಕ್ರಮದಲ್ಲಿ ನಾವೆಲ್ಲರೂ ಒಟ್ಟಿಗೆ ಸೇರಿ ಸಂಭ್ರಮಿಸಿದ್ದೇವೆ. ಕಿಕ್ಕಿರಿದು ತುಂಬಿದ್ದ ಸಭಾಭವನದಲ್ಲಿ ಪದ್ಮಶೀ ಪುರಸ್ಕೃತ ಪರಿಸರವಾದಿ ಶ್ರೀಮತಿ ಸಾಲುಮರದ ತಿಮ್ಮಕ್ಕ ಹಾಗೂ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರ ಉಪಸ್ಥಿತಿಯಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ  ಶ್ರೀ ಐಕಳ ಹರೀಶ್ ಶೆಟ್ಟಿಯವರಿಗೆ ದಿ. ಮುಲ್ಕಿ ಸುಂದರ ರಾಂ ಶೆಟ್ಟಿ ಪ್ರಶಸ್ತಿ, ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ. ಎಂ. ಜಯಕರ ಶೆಟ್ಟಿ ಇವರಿಗೆ ದಿ. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಶೈಕ್ಷಣಿಕ ಸಾಧಕ ಪ್ರಶಸ್ತಿ ಹಾಗೂ ಖ್ಯಾತ ಸಂಗೀತ ನಿರ್ದೇಶಕ ಶ್ರೀ ಗುರುಕಿರಣ್ ಇವರಿಗೆ ದಿ. ಡಾ. ಡಿ. ಕೆ. ಚೌಟ ಸಾಂಸ್ಕೃತಿಕ ಸಾಧಕ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇದೇ ಸಂದರ್ಭದಲ್ಲಿ ವಿಶೇಷ ಗೌರವಾನ್ವಿತರಾದ ಶ್ರೀ ಸಂಘದ ಹಿರಿಯ ಸದಸ್ಯರುಗಳಾದ ಅಮರ್ ಇಂಜಿನಿಯರ್ಸ್ ಆಡಳಿತ ಪಾಲುದಾರರಾದ ಶ್ರೀ ಬಿ. ಜಗನ್ನಾಥ ಶೆಟ್ಟಿ, ಹಾಗೂ ಚಂದ್ರ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ  ಐ.ಎಂ.ರಾಜಾರಾಮ್ ಶೆಟ್ಟಿ ಇವರುಗಳನ್ನು ಸನ್ಮಾನಿಸಲಾಗಿದೆ.

ಪದ್ಮಶ್ರೀ ಪುರಸ್ಕೃತ ಹಿರಿಯ ಚೇತನ ಶ್ರೀಮತಿ ಸಾಲುಮರದ ತಿಮ್ಮಕ್ಕನವರ ಹುಟ್ಟೂರಿನಲ್ಲಿ ಸ್ವಂತ ನೆಲೆಯಿಲ್ಲದ ಹಿನ್ನೆಲೆಯಲ್ಲಿ ಬೆಂಗಳೂರು ಬಂಟರ ಸಂಘದಿಂದ ಒಂದು ಲಕ್ಷ ರೂ., ಶ್ರೀ ಕೆ. ಪ್ರಕಾಶ್ ಶೆಟ್ಟಿಯವರ ವೈಯುಕ್ತಿಕ ನಿಧಿಯಿಂದ ಐದು ಲಕ್ಷ ರೂ ಹಾಗೂ ಜಾಗತಿಕ ಬಂಟರ ಸಂಘಗಳ ಒಕ್ಕೂಟಗಳ ವತಿಯಿಂದ ಐವತ್ತು ಸಾವಿರ ರೂ.ಗಳನ್ನು ದೇಣಿಗೆ ನೀಡುವ ಮೂಲಕ ಅವರ ಮನೆಯ ಪುನರ್‌ನಿರ್ಮಾಣಕ್ಕೆ ನಮ್ಮ ಕಿಂಚಿತ್ ಸೇವೆ ಸಂದಿದೆ ಎನ್ನುವ ಕೃತಾರ್ಥ ಭಾವ ನಮ್ಮದಾಗಿದೆ.

ಅತ್ಯಂತ ಮನಮೋಹಕವಾಗಿ ಮೂಡಿಬಂದ ನೃತ್ಯ ರೂಪಕ ಆಯೋಜಿಸಿದ ಸಾಂಸ್ಕೃತಿಕ ಸಮಿತಿಯ ಚೇರ್‌ಮೆನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಮತ್ತು ತಂಡಕ್ಕೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದ ತಮಗೆಲ್ಲರಿಗೂ ಹೃದಯಸ್ಪರ್ಶಿ ವಂದನೆಗಳು.

ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ನಮ್ಮೆಲ್ಲಾ ಕಾರ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ತಮಗೆಲ್ಲರಿಗೂ ನಾವು ಅಭಾರಿಯಾಗಿದ್ದೇವೆ. 2022 ರ ಜನವರಿ ತಿಂಗಳ ಕೊನೆಯ ವಾರದಲ್ಲಿ ಸಂಘದ ಆಡಳಿತ ಮಂಡಳಿ ಚುನಾವಣೆ ನಡೆಸಲು ಉದ್ದೇಶಿಸಲಾಗಿದ್ದರೂ, ಮಹಾಸಭೆಯ ನಿರ್ದೇಶನದಂತೆ 2022 ರ ಜೂನ್-ಜುಲೈ ತಿಂಗಳಿನಲ್ಲಿ ಚುನಾವಣೆ ನಡೆಸಲಾಗುವುದು.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಓಂ ಶ್ರೀ ಗುರುಭ್ಯೋ ನಮಃ

ಸರ್ವರಿಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು. ಭಗವಂತನು ನಮ್ಮೆಲ್ಲರುವ ಅಜ್ಞಾನದ ಅಂಧಕಾರವನ್ನು ತೊಲಗಿಸಿ ಜ್ಞಾನದ ಬೆಳಕನ್ನು, ಸುಖ, ಸಮೃದ್ಧಿ, ನೆಮ್ಮದಿಯನ್ನು ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

ಸಂಘದ ಆವರಣದಲ್ಲಿ ಪ್ರತೀ ವರ್ಷದಂತೆ ಈ ವರ್ಷವೂ ಮಹಿಳಾ ವಿಭಾಗದ ಸಾರಥ್ಯದಲ್ಲಿ ದಸರಾ ಆಚರಣೆ, ಭಜನೆ, ದಾಂಡಿಯಾ ನೃತ್ಯ, ಲಲಿತ ಸಹಸ್ರನಾಮದ ಮೂಲಕ ಬಹಳ ಸಡಗರದಿಂದ ನಡೆಯಿತು. ಅನೇಕ ಮಹಿಳೆಯರು, ಮಕ್ಕಳು, ಸದಸ್ಯರು ಈ ಆಚರಣೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಅಂದವನ್ನು ಹೆಚ್ಚಿಸಿದ್ದು ಅತ್ಯಂತ ಸಂತೋಷದ ಸಂಗತಿ. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಪಟ್ಟ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ ಹಾಗೂ ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈಯವರು ಹಾಗೂ ಅವರ ಸಮಿತಿಯ ಸದಸ್ಯರಿಗೆ ವಂದನೆಗಳು. ಕೋವಿಡ್‌ನಿಂದಾಗಿ ಕಳೆದ ಒಂದೂವರೆ ವರ್ಷದಿಂದ ಸಂಘದ ಆರ್ಥಿಕ ಪರಿಸ್ಥಿತಿ ಕುಂಠಿತವಾಗಿದ್ದು, ಇತ್ತೀಚಿನ ದಿನಗಳಲ್ಲಿ ದಿನೇ ದಿನೇ ಚೇತರಿಕೆಯನ್ನು ಕಂಡುಕೊಳ್ಳುತ್ತಿದೆ ಎನ್ನುವುದು ಸಂತೋಷದ ವಿಚಾರ.

ಸರ್ಕಾರದ ಆದೇಶದ ಮೇರೆಗೆ ಶಾಲೆಯೂ ಪುನರಾರಂಭವಾಗಿದ್ದು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಶಿಕ್ಷಕ ಶಿಕ್ಷಕಿಯರ ಆಗಮನದಿಂದ ಶಾಲೆಯ ಆವರಣದಲ್ಲಿ ಮುಂಚಿನಂತೆ ನೈಸರ್ಗಿಕ ನಲಿವು ಕಾಣಿಸುತ್ತದೆ. ಹಲವು ತಿಂಗಳುಗಳಿಂದ ಮನೆಯಲ್ಲಿ ಕುಳಿತು ಮಂಕಾಗಿದ್ದ ಮುಖದಲ್ಲಿ ಮಂದಹಾಸ ಮೂಡಿದೆ.

ಆರೋಗ್ಯ ವಿಮೆ: ಆರೋಗ್ಯವೇ ಭಾಗ್ಯ ಎನ್ನುವ ನಾಣ್ನುಡಿಯಂತೆ ಇಂದು ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಸ್ವಸ್ಥವಾಗಿಟ್ಟುಕೊಳ್ಳುವುದು ಬಹಳ ಪ್ರಾಮುಖ್ಯ. ಯಾವುದೇ ಜ್ವರ ಹಾಗೂ ಕಾಯಿಲೆ ಅಪಘಾತವಾದರೂ ಕೂಡ ವೈದ್ಯರ ಹಾಗೂ ಆಸ್ಪತ್ರೆಯ ವೆಚ್ಚ ಗಗನಕ್ಕೇರಿದೆ. ಅದೆಷ್ಟೋ ಕುಟುಂಬಗಳು ಆ ವೆಚ್ಚವನ್ನು ಭರಿಸಲಾಗದೆ, ಭಯಭೀತರಾಗಿ ಪ್ರಾಣ ಬಿಟ್ಟಿದ್ದೂ ಇದೆ, ಹಾಗೆಯೇ ಆ ನೋವನ್ನು ದಿನನಿತ್ಯ ಅನುಭವಿಸುವವರೂ ಇದ್ದಾರೆ. ಇದಕ್ಕೆ ಮುಂಜಾಗ್ರತೆವಹಿಸಿ, ಕುಟುಂಬದ ಆರೋಗ್ಯವಿಮೆಯನ್ನು ಸುಮಾರು 20 ಲಕ್ಷದವರೆಗೆ ಮಾಡಿಕೊಳ್ಳುವುದು ಜೀವನದ ಸುರಕ್ಷತಾ ದೃಷ್ಟಿಯಿಂದ ಬಹಳ ಉಪಯುಕ್ತ ಎನ್ನುವುದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನೊಂದವರ ಅನುಭವ. ಆಸ್ತಿ, ಅಂತಸ್ತಿನ ಬಗ್ಗೆ ಹೆಚ್ಚು ಒತ್ತನ್ನು ಕೊಡದೆ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಇಂದಿನ ದಿನಗಳಲ್ಲಿ ಬಹಳ ಮುಖ್ಯವಾಗಿದೆ.

ಸರ್ವೇ ಜನ ಸುಖಿನೋ ಭವಂತು.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಕರ್ನಾಟಕ ರಾಜ್ಯೋತ್ಸವ – ಏಕೀಕೃತ ಕರ್ನಾಟಕ ರಾಜ್ಯದ ಶುಭಾರಂಭ ಪ್ರಬಲ ಕೇಂದ್ರ–ಪ್ರಬಲ ರಾಜ್ಯ/ದೇಶದ ಸಮಗ್ರತೆ – ಐಕ್ಯತೆಗೆ ಆದ್ಯತೆ



ಎ. ಗಿರೀಶ್ ರೈ

**ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಕನ್ನಡದ ಅಧಿದೇವತೆ ತಾಯಿ ಭುವನೇಶ್ವರಿಯ ಪೂಜೆ ಸಡಗರ ಮತ್ತು ಸಂಭ್ರಮದಿಂದ ನವಂಬರ್ ತಿಂಗಳ ಪ್ರಾರಂಭದಿಂದಲೇ ರಾಜಾದ್ಯಂತ ನಡೆಯುತ್ತದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಭುವನಗಿರಿಯಲ್ಲಿ ಸುಮಾರು ಮುನ್ನೂರು ಅಡಿ ಎತ್ತರದ ಗುಡ್ಡದ ಮೇಲೆ ಶ್ರೀ ಭುವನೇಶ್ವರಿ ದೇವಿಯ ಮಂದಿರವಿದೆ. ಕರ್ನಾಟಕದ ಏಕೈಕ ಶ್ರೀ ಭುವನೇಶ್ವರಿ ದೇವಸ್ಥಾನವನ್ನು ಬಿಳಗಿ ಬಸವೇಂದ್ರರಾಜ 1692ರಲ್ಲಿ ನಿರ್ಮಿಸಿದ್ದರು. ಶ್ರೀದೇವಿಯ ಪೂಜೆಯ ಕಲ್ಪನೆಯನ್ನು ಮೊದಲಿಗೆ ಕದಂಬರು ಪ್ರಾರಂಭಿಸಿದ್ದರು. ವಿಜಯನಗರದ ಅರಸರೂ ಭುವನೇಶ್ವರಿ ದೇವಿಯನ್ನು ಪೂಜಿಸುತ್ತಿದ್ದರು. ಸಿದ್ಧಾಪುರ ಪ್ರಾರಂಭದಲ್ಲಿ ಕದಂಬರ ಅಧೀನದಲ್ಲಿದ್ದು ನಂತರ ವಿಜಯನಗರ ಸಾಮಂತರ ಆಡಳಿತಕ್ಕೆ ಸೇರಿತ್ತು. ಬಿಳಗಿ ಅರಸರು ಕನ್ನಡದ ವ್ಯಾಕರಣ ಪರಿಪೂರ್ಣತೆ ಹೊಂದಲು, ಬೆಳೆಯಲು ಅಪಾರ ಕೊಡುಗೆ ನೀಡಿದ್ದರು.**

ಕನ್ನಡ ನಾಗರಿಕ ಭಾಷೆಯೇ? ಅದಕ್ಕೇನಾದರೂ ಸಾಹಿತ್ಯವಿದೆಯೇ? ಎಂದು ಕೆಲವು ಸಂಸ್ಕೃತ ಪಂಡಿತರ ಪ್ರಶ್ನೆಗಳಿಂದ ಕನ್ನಡಿಗರ ಭಾವನೆ ಕೆರಳುತ್ತಿದ್ದು, ಅವರ ಗೌರವ, ಆತ್ಮವಿಶ್ವಾಸ ಹೆಚ್ಚುತ್ತಿತ್ತು. ಇದರಿಂದ ತಮ್ಮ ಇತಿಹಾಸದಲ್ಲಿ ಹೆಮ್ಮೆ ಪಟ್ಟುಕೊಳ್ಳಲು ಸಾಕಷ್ಟು ಸಾಧನೆಗಳಿವೆ ಎಂದು ಕನ್ನಡಿಗರು ಮನಗಂಡರು. ಹೆಚ್ಚು ಕಮ್ಮಿ ಎಲ್ಲಾ ವಿಷಯಗಳಲ್ಲಿ ಕನ್ನಡದಲ್ಲಿ ಗ್ರಂಥಗಳು ಕ್ರಿ.ಶ ಮೂರನೇ ಶತಮಾನದಿಂದಲೂ ಹುಟ್ಟಿದ್ದವೆಂದು ಮನವರಿಕೆಯಾಗಿತ್ತು. ಆಲೂರು ವೆಂಕಟರಾಯರ 'ಕರ್ನಾಟಕದ ಗತವೈಭವ' ಪುಸ್ತಕ ಪ್ರೇರಣೆಯಾಯಿತು.

ಇಂತಹ ಸನ್ನಿವೇಶದಲ್ಲಿ ಬಿಳಗಿಯಲ್ಲಿದ್ದ ಭಟ್ಟಾಕಳಂಕ ದೇವ ನಾಮಾಂಕಿತ ಕನ್ನಡ ಭಾಷೆಗೆ ವ್ಯಾಕರಣ ರಚಿಸಿ ಕನ್ನಡ ಪಂಡಿತರ ಭಾಷೆಯಾಗಬಹುದೆಂದು ಪ್ರತಿಪಾದಿಸಿದ್ದರು. ಇವರು **ಕರ್ನಾಟಕಶಬ್ದಾನುಶಾಸನ** ಎಂಬ ವ್ಯಾಕರಣ ಗ್ರಂಥವನ್ನು ರಚಿಸಿ, ಕನ್ನಡ ಭಾಷೆಯ ಬಗ್ಗೆ ಪಂಡಿತರಲ್ಲಿ ಅಸಡ್ಡೆ ಇದ್ದ ಕಾಲಘಟ್ಟದಲ್ಲಿ ಕನ್ನಡದಲ್ಲಿ ಸಾಹಿತ್ಯ ಇದೆ, ಶಾಸ್ತ್ರ ಇದೆ ಹಾಗೂ ಪ್ರತಿಭೆ ಇದೆ ಎಂದು ಅಂದಿನ ವಿದ್ವಾಂಸರೊಂದಿಗೆ ವಾದಿಸಿ, ಭಟ್ಟಾಕಳಂಕದೇವ ಕನ್ನಡಕ್ಕೆ ಸ್ಥಾನಮಾನ ದೊರಕಿಸಿಕೊಟ್ಟಿದ್ದು ಭುವನಗಿರಿಯ ಮಡಿಲಲ್ಲಿ ಎಂಬ ಅಂಶ ಗಮನಾರ್ಹ.

ಭಟ್ಟಾಕಳಂಕದೇವ ಹಾಡುವಳ್ಳಿ ಜೈನ ಮೊನೇಸ್ಟರಿಯಲ್ಲಿ ವ್ಯಾಸಂಗ ಮಾಡಿದ್ದು, ಪ್ರಾಕೃತ್ ಮಗಧಿ, ಸಂಸ್ಕೃತ ಮೊದಲಾದ ಆರು ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು. ಕರ್ನಾಟಕಶಬ್ದಾನುಶಾಸನ ವ್ಯಾಕರಣ ಹಿಂದಿನ ವ್ಯಾಕರಣ ಗ್ರಂಥಗಳಿಂದ ಭಿನ್ನವಾಗಿದ್ದು 592 ಸಂಸ್ಕೃತ ಸೂತ್ರಗಳನ್ನೊಳಗೊಂಡಿದೆ. ನಾಗವರ್ಮ II ಹನ್ನೆರಡನೇ ಶತಮಾನದಲ್ಲಿ ಬರೆದ ಹಳೆಗನ್ನಡ ವ್ಯಾಕರಣ **ಕರ್ನಾಟಕ ಭಾಷಭೂಷಣ,** ಪಾನಿನಿ ಹಾಗೂ ಇತರರು ಬರೆದಿರುವ ರೀತಿಯಲ್ಲಿದೆ. ಕೇಸಿರಾಜರವರು ಹದಿಮೂರನೇ ಶತಮಾನದಲ್ಲಿ ಬರೆದಿರುವ ಒಂದು ವಿಶಿಷ್ಠ ಕೃತಿ **ಶಬ್ಧಮಣಿದರ್ಪಣ,** ಇದರಲ್ಲಿ ಹಳೆಗನ್ನಡ ಭಾಷೆಯ ವಿವಿಧ ಆಯಾಮಗಳನ್ನು ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಸಂಸ್ಕೃತ ಪಂಡಿತರು ಅಂದು ಕನ್ನಡ ಭಾಷೆಯ ಕುರಿತು ಮಾಡಿದ ಹೀನಾರ್ಥದ ಟಿಪ್ಪಣಿಯಿಂದ ಮನನೊಂದ ಭಟ್ಟಾಕಳಂಕದೇವ ಹಳೆಗನ್ನಡ ವ್ಯಾಕರಣವನ್ನು ಒಂದು ಸವಾಲಾಗಿ ಬರೆದು ತನ್ನ ಪಾಂಡಿತ್ಯವನ್ನು ವಿಷಧಿಕರಿಸಿದ್ದರು.

### ವಿಶಾಲ ಪರಿಕಲ್ಪನೆ

ಕರ್ನಾಟಕ ಕೇವಲ ಒಂದು ಪ್ರದೇಶ ಮಾತ್ರವಲ್ಲ, ಇದೊಂದು ವಿಶಾಲ ಪರಿಕಲ್ಪನೆ. ರಾಮಾಯಣದಲ್ಲಿ ಉಲ್ಲೇಖಿಸಿರುವ ಒಂದು ಅರಣ್ಯಪ್ರದೇಶವನ್ನು ಕರ್ನಾಟಕವೆಂದು ಗುರುತಿಸಿದ್ದು, ಈ ಭೂಭಾಗವನ್ನು ಅಗಸ್ತ್ಯ ಮಹರ್ಷಿ ಮಾನವ ವಾಸಯೋಗ್ಯ ಪ್ರದೇಶವಾಗಿ ಪರಿವರ್ತಿಸಿದ್ದರೆಂದು ಪ್ರತೀತಿ. ಅಂತೆಯೇ ಮಹಾಭಾರತದಲ್ಲಿ ಕರ್ನಾಟಕವನ್ನು ಒಂದು ಮುಖ್ಯ ಪ್ರದೇಶವೆಂದು ಪ್ರಸ್ತಾಪಿಸಲಾಗಿದೆ. ಚಾರಿತ್ರಿಕ ಮಹತ್ವದ ಈ ಪ್ರದೇಶ ಸುಮಾರು 3ನೇ ಶತಮಾನದಲ್ಲಿ ಮೌರ್ಯ ವಂಶಸ್ಥರ ಆಳ್ವಿಕೆಗೆ ಒಳಪಟ್ಟಿತ್ತು. ಕನ್ನಡ ಭಾಷೆ ಕ್ರಿಸ್ತಶಕ ಪೂರ್ವದಿಂದಲೇ ಇದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಪ್ರಾಚೀನ ಗ್ರೀಕ್ ನಾಟಕಗಳಲ್ಲಿ, ಅಶೋಕನ ಹಲವು ಶಾಸನಗಳಲ್ಲಿ ಕನ್ನಡ ಮಾತುಗಳ ಬಳಕೆಯಿತ್ತು. ಅಂತೆಯೇ ಹಲವು ಪ್ರಾಚೀನ ಗ್ರಂಥಗಳಲ್ಲಿ ಕನ್ನಡ ಕೃತಿಗಳು–ಕವಿಗಳ ಉಲ್ಲೇಖವಿದೆ. ಕನ್ನಡ ಸಾಹಿತ್ಯ ಕ್ರಿಸ್ತಶಕದ ಪ್ರಾರಂಭದಿಂದಲೇ ಪ್ರವರ್ಧಮಾನವಾಗಿ ನಂತರ ಸಮೃದ್ಧಿಯಾಗಿ ಬೆಳೆಯಿತು. ಅಶೋಕ ಚಕ್ರವರ್ತಿಯ ಒಂದು ಶಾಸನದಲ್ಲಿ ಉಲ್ಲೇಖಿಸಿರುವ "ಇಸಿಲ" ಕನ್ನಡದ ಪದವೆಂದು ಪ್ರೊ. ಡಿ.ಎಲ್ ನರಸಿಂಹಾಚಾರ್ ಅಭಿಪ್ರಾಯ ಪಟ್ಟಿದ್ದರು. ಅಲೆಗ್ಸಾಂಡ್ರಿಯದ ಟಾಲೆಮಿ ತನ್ನ ಪುಸ್ತಕ ಜಿಯೋಗ್ರಾಫಿಯಲ್ಲಿ ಹಲವು ಕನ್ನಡದ ಪದಗಳನ್ನು ಗುರುತಿಸಿದ್ದು, ಇದು ಕನ್ನಡ ಭಾಷೆಯ ಪ್ರಾಚೀನತೆಯನ್ನು ತೋರಿಸುತ್ತದೆ.

ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಆಸ್ಥಾನಕವಿ ವಿಜಯನಿರ್ಮಿತ **'ಕವಿರಾಜಮಾರ್ಗ'** ಕನ್ನಡದ ಮೊದಲ ಗ್ರಂಥ. ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕುರಿತು ಅಮೂಲ್ಯ ಅಭಿಪ್ರಾಯವಿದರಲ್ಲಿದೆ. ಕನ್ನಡ ನಾಡಿನಲ್ಲಿ ಹಲವರು ಓದದೆಯೂ ಕವಿಗಳಾಗಿ ಕಾವ್ಯ ಪ್ರಯೋಗ ಮಾಡಿದ್ದಾರೆಂದು ಉಲ್ಲೇಖವಿದೆ. ಚಾಳುಕ್ಯರಾಜ ಅರಿಕೇಸರಿಯ ಆಸ್ಥಾನ ಕವಿ ಪಂಪ ಕನ್ನಡದ ಆದಿಕವಿ. ಇವನ ವಿಕ್ರಮಾರ್ಜುನ ವಿಜಯ, ಪಂಪಭಾರತ, ಪೌರಾಣಿಕ ಮತ್ತು ಐತಿಹಾಸಿಕ ಅಂಶಗಳನ್ನೊಳಗೊಂಡಿದ್ದು, ಭಾರತದ ಭಾಷೆಗಳಲ್ಲೆ ಪ್ರಸಿದ್ಧವಾಗಿದೆ. ಆದಿಪುರಾಣ ಪಂಪನ ಇನ್ನೊಂದು ಹೆಸರಾಂತ ಕೃತಿ. ಇವರಲ್ಲದೆ ರನ್ನ, ಪೊನ್ನ ಮತ್ತು ಜನ್ನ ಮಹಾಕವಿಗಳೆಂದು ಹೆಸರು ಗಳಿಸಿದವರು. ಈ ಕವಿವರ್ಯರನ್ನೊಳಗೊಂಡ ಕನ್ನಡ ಸಾಹಿತ್ಯ ಮುಂದಿನ ಕೆಲವು ಶತಮಾನಗಳ ತನಕ ತನ್ನ ವಿಶಿಷ್ಟತೆಯಿಂದ ಪ್ರಸಿದ್ಧಿ ಹೊಂದಿತ್ತು.

### ಕನ್ನಡದ ಸ್ಥಿತಿ

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ 'Divide and Rule' ನಂತೆ ಇಂದಿನ ಕರ್ನಾಟಕದ ಒಂದು ಭಾಗ ಮೈಸೂರು ಸಂಸ್ಥಾನದಲ್ಲಿದ್ದು ಅಲ್ಲಿ ಮಾತ್ರ ಕನ್ನಡ ಭಾಷೆಗೆ ಪ್ರಾಧಾನ್ಯತೆ ಇತ್ತು. ಈಗಿನ ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಮತ್ತು ಬಿಜಾಪುರ ಜಿಲ್ಲೆಗಳು ಮುಂಬೈ ಪ್ರಾಂತ್ಯದ ಅಧಿಪತ್ಯಕ್ಕೆ ಸೇರಿದ್ದವು. ಇಲ್ಲಿ ಕನ್ನಡಿಗರು ಅಲ್ಪ ಸಂಖ್ಯಾತರಾಗಿದ್ದರು. ಅವಿಭಜಿತ ದಕ್ಷಿಣ ಕನ್ನಡ, ಬಳ್ಳಾರಿ, ಕೊಳ್ಳೇಗಾಲ ತಾಲ್ಲೂಕು, ತಮಿಳು, ತೆಲುಗು ಪ್ರಾಬಲ್ಯವಿದ್ದ ಮದ್ರಾಸ್ ಪ್ರಾಂತ್ಯದಲ್ಲಿದ್ದು, ಭೌಗೋಳಿಕ ನಿಕಟತೆ ಇರಲಿಲ್ಲ. ರಾಯದುರ್ಗ, ಸಂಡೂರು, ಮುಧೋಳ ಕಿರುಸಂಸ್ಥಾನಗಳು ಬೇರೆ ಬೇರೆ ಆಡಳಿತಕ್ಕೆ ಸೇರಿದ್ದು, ಶಾಪುರ, ಶಿರಹಟ್ಟಿ ಪ್ರದೇಶಗಳು ಗುಣದಾಳು ಮೊದಲಾದ ಗ್ರಾಮಗಳ ಗುಂಪು ಹೈದರಾಬಾದ್ ಸಂಸ್ಥಾನದಲ್ಲಿದ್ದು, ಅಲ್ಲಿ ಉರ್ದುಗೆ ಪ್ರಾಧಾನ್ಯತೆ. ಜಮಖಂಡಿ, ಮುಧೋಳ ಸಂಸ್ಥಾನಗಳಲ್ಲಿ ಮರಾಠಿ, ಈ ಎಲ್ಲಾ ಪ್ರದೇಶಗಳಲ್ಲಿ ಕನ್ನಡ ಅಂದು ನಿರ್ಗತಿಕ ಭಾಷೆ. ಇತರ ಭಾಷೆಗಳ ಪ್ರಾಂತ್ಯಗಳಿಗೆ ಹತ್ತಿರವಿರುವ ಹೊಸೂರು, ಮಡಕಶಿರಾ ಅಲೂರು, ಆದವಾನಿ ತಾಳವಾಡಿ, ದಕ್ಷಿಣ ಸೊಲ್ಲಾಪುರ, ಅರಳುಕೋಟೆ ಮೊದಲಾದ ಪ್ರದೇಶಗಳಲ್ಲಿ ಕನ್ನಡದ ಧ್ವನಿ ಅತೀ ಕ್ಷೀಣವಾಗಿತ್ತು. ಉತ್ಕೃಷ್ಟ ಪರಂಪರೆ, ಸಂಸ್ಕೃತಿ ಇರುವ ಕದಂಬರು, ಚಾಲುಕ್ಯರು, ರಾಷ್ಟ್ರಕೂಟ ಮತ್ತು ವಿಜಯನಗರದ ರಾಜರು ಕನ್ನಡ ಭಾಷೆಯಲ್ಲಿ ಆಡಳಿತ ನಡೆಸಿದ್ದ ಕನ್ನಡ ನಾಡು ಸುಮಾರು 20 ಆಡಳಿತ ವ್ಯವಸ್ಥೆಗೆ ಸೇರಿದ್ದು, ಒಡೆದ ಕನ್ನಡಿಯಂತ ಸ್ಥಿತಿಗೆ ನೂಕಲ್ಪಟ್ಟಿತ್ತು.

**ಏಕೀಕರಣ**

ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು ಒಂದೂವರೆ ಕೋಟಿ ಕನ್ನಡಿಗರು ಇಪ್ಪತ್ತು ನಾನಾ ಭಾಷೆಗಳ ಆಡಳಿತದಲ್ಲಿ ಹಂಚಿಹೋಗಿದ್ದರು. ಇವರೆಲ್ಲರೂ ಅಲ್ಲಿ ಅಲ್ಪಸಂಖ್ಯಾತರಂತಿದ್ದು ಕನ್ನಡ ಧ್ವನಿ ಕ್ಷೀಣವಾಗಿತ್ತು. ಕರ್ನಾಟಕದ ಚರಿತ್ರೆಯಲ್ಲಿ ಕದಂಬ ರಾಜ್ಯವನ್ನು ಸ್ಥಾಪಿಸಿದ ಮಯೂರ ಶರ್ಮನ ಆಡಳಿತ ಉತ್ತಮವಾಗಿತ್ತು. ರಾಷ್ಟ್ರಕೂಟ ರಾಜರಲ್ಲಿ ನೃಪತುಂಗ ಅಗ್ರಗಣ್ಯ. ಇಂದಿನ ಮಳಖೇಡ ನೃಪತುಂಗನ ರಾಜಧಾನಿಯಾಗಿತ್ತು. ಇಲ್ಲಿ ಸಾಹಿತ್ಯ, ಸಂಸ್ಕೃತಿ ಅಭಿವೃದ್ಧಿಗೆ ಪ್ರೋತ್ಸಾಹ ವಿಪುಲವಾಗಿತ್ತು. ಚಾಳುಕ್ಯವಂಶದ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಆಡಳಿತವನ್ನು ಇತಿಹಾಸದಲ್ಲಿ **"ಸ್ವರ್ಣಯುಗವೆಂದು"** ಉಲ್ಲೇಖಿಸಲಾಗಿದೆ. ಕವಿ ಬಿಲ್ಹಣನ ವಿಕ್ರಮಾಂಕದೇವ ಚರಿತ್ರೆಯಲ್ಲಿ ವಿಕ್ರಮಾದಿತ್ಯನ ಕಾಲದಲ್ಲಿ ಶಿಲ್ಪಕಲೆ, ಸಂಗೀತ, ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ದೊರಕುತ್ತಿತ್ತು ಎಂದು ಉಲ್ಲೇಖಿಸಲಾಗಿದೆ.

**ಏಕೀಕರಣ ಅಭಿಯಾನ**

ಕರ್ನಾಟಕ ಏಕೀಕರಣ ಚಳುವಳಿ 1905–1906 ಸ್ವದೇಶಿ ಚಳುವಳಿಯ ಮೂಲಕ ಜಾಗೃತವಾಯಿತು. ಕರ್ನಾಟಕ ಸ್ವರಾಜ್ಯಕ್ಕಾಗಿ ಹೋರಾಡಿದಂತೆ, **ಸ್ವತಂತ್ರ ಭಾರತ ಏಕತಂತ್ರ ಕರ್ನಾಟಕ ಅಭಿಯಾನವ**ನ್ನು ಪ್ರಾರಂಭಿಸಿತ್ತು. ಅಂದಿನ ಕರ್ನಾಟಕದ ಭಾಗಗಳು, ದೇಶೀ ಸಂಸ್ಥಾನಗಳ ಕನ್ನಡ ಪ್ರದೇಶಗಳನ್ನು ಸೇರಿಸಿ ಕರ್ನಾಟಕ ಏಕೀಕರಣ ಚಳವಳಿಯ ಅಂಗವಾಗಿ ಭಾಷೆ ಮತ್ತು ಸಾಹಿತ್ಯ ಏಕೀಕರಣಕ್ಕೆ ಎರಡು ಸಾಹಿತ್ಯ ಸಂಸ್ಥೆಗಳ ಪ್ರಾರಂಭ, ಧಾರವಾಡದಲ್ಲಿ ಕರ್ನಾಟಕ ಸಭೆಯ ಪ್ರಾರಂಭ, ಬ್ರಿಟಿಷ್ ಕರ್ನಾಟಕ ಭಾಗಗಳನ್ನು ಸೇರಿಸುವುದು ಮತ್ತು ಎಲ್ಲಾ ಭಾಗಗಳನ್ನು ಸೇರಿಸಿ, ಕರ್ನಾಟಕ ರಾಜ್ಯದ ಬೇಡಿಕೆಯನ್ನು ಒಪ್ಪಿಸಲಾಗಿತ್ತು.

ಇಂತಹ ಸನ್ನಿವೇಶದಲ್ಲಿ 1890ರಲ್ಲಿ ಆರಂಭವಾದ ಕರ್ನಾಟಕ ವಿದ್ಯಾವರ್ಧಕ ಸಂಘ ಕರ್ನಾಟಕ ಏಕೀಕರಣದ ಕಲ್ಪನೆಗೆ ವೇದಿಕೆಯಾಯಿತು. ಕನ್ನಡ ಭಾಷಾ ಪ್ರದೇಶಗಳು ಒಂದಾಗಿ ಕನ್ನಡಕ್ಕೇ ಒಂದು ಪ್ರಾಂತ್ಯ ಬೇಕೆಂಬ ವಾದವನ್ನು 1906ರಲ್ಲಿ ಬೆನಗಲ್ ರಾಮರಾಯರು ಮುಂದಿಟ್ಟರು. ಇದರನಂತರ ಕರ್ನಾಟಕ ಏಕೀಕರಣ ಹೋರಾಟ ತೀವ್ರಗೊಂಡಿತು. ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರು ಏಕೀಕರಣದ ಕನಸು ಕಂಡ ಮೊದಲಿಗರಲ್ಲಿ ಒಬ್ಬರು. ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಏಕೀರಣದ ಪ್ರಸ್ತಾಪಮಾಡಿದ ಸರ್. ಸಿದ್ದಪ್ಪ ಕಂಬಳಿ, ದೇಶದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಕ್ಕೆ ಒಂದೇ ರೀತಿಯಲ್ಲಿ ಹೋರಾಡಿದ ಎಸ್. ನಿಜಲಿಂಗಪ್ಪ, ಡಾ. ಚೆನ್ನಬಸಪ್ಪ ಪಟ್ಟದೇವರು, ಕೆ.ಎಫ್ ಪಾಟೀಲರು, ಕೆಂಗಲ್ ಹನುಮಂತಯ್ಯ, ಅಂದಾನಪ್ಪ ದೊಡ್ಡಮೇಟಿ, ಆರ್.ಆರ್. ದಿವಾಕರ್, ಜಯದೇವಿತಾಯಿ ಲಿಗಾಡೆ ಮೊದಲಾದವರು ಕರ್ನಾಟಕ ಏಕೀಕರಣಕ್ಕೆ ಹೋರಾಟ ನಡೆಸಿದ ಪ್ರಮುಖರು. ಕರಾವಳಿಯ ಕೆ.ಬಿ. ಜಿನರಾಜ ಹೆಗ್ಗಡೆ, ಕೆ.ಆರ್. ಕಾರಂತರು, ಎ.ಬಿ. ಶೆಟ್ಟಿ, ಡಾ. ಕೆ.ಕೆ. ಹೆಗ್ಡೆ ಮತ್ತು ಡಾ. ಕೆ. ನಾಗಪ್ಪ ಆಳ್ವ ಮತ್ತಿತ್ತರರು ಏಕೀಕರಣದ ಮುಂಚೂಣಿಯಲ್ಲಿದ್ದವರು. ಇವರೆಲ್ಲರ ಹೋರಾಟದಿಂದ ಭಾಷಾವಾರು ಪ್ರಾಂತ್ಯಗಳ ವಿಂಗಡನೆ ಸಮಿತಿಯ ಶಿಫಾರಸ್ಸಿನಂತೆ 1956ರ ನವಂಬರ್ ಒಂದನೇ ತಾರೀಕಿನಂದು ಮಹಾ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ಹಲವು ಕನ್ನಡ ಭಾಷಾ ಭಾಗಗಳು ಹೊರಗುಳಿದರೂ ಪ್ರಮುಖವಾಗಿ ಕಾಸರಗೋಡು, ಮಡಕಶಿರ, ತಾಳವಾಡಿ ಮೊದಲಾದ ಅಚ್ಚಕನ್ನಡ ಪ್ರದೇಶಗಳನ್ನು ಇತರ ರಾಜ್ಯಗಳಿಗೆ ಸೇರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದ ಕಾಸರಗೋಡನ್ನು ಕೇರಳ ರಾಜ್ಯದಲ್ಲಿ ಸೇರಿಸಿದ್ದ ರಾಜ್ಯ ಪುನರ್ ವಿಂಗಡಣ ಸಮಿತಿ ಕರ್ನಾಟಕಕ್ಕೆ, ಕನ್ನಡ ಭಾಷೆಗೆ ಅನ್ಯಾಯವೆಸಗಿದೆ.

ಒಂದು ಭಾಷೆಯನ್ನಾಡುವ ಜನರು ಬೇರೊಂದು ಭಾಷೆಯ ನೆರೆರಾಜ್ಯದಲ್ಲಿ ಇದಬಾರದೆಂದಿಲ್ಲ. ಒಂದು ಭಾಷೆಯ ಜನರ ಸಂಸ್ಕೃತಿ ಸಂರಕ್ಷಣೆ ಮುಖ್ಯವಾಗಿದೆ.

ಬೇರೆ ಬೇರೆ ಭಾಷೆಗಳು ಜನರು ಐಕ್ಯತೆಯ ಶಕ್ತಿಯಾಗಬೇಕು. ಭಾರತ ದೇಶದ ಭಾವನಾತ್ಮಕ ಒಗ್ಗಟ್ಟನ್ನು ಇನ್ನೂ ಬಲ ಪಡಿಸಬೇಕು. ಇದಕ್ಕೆ ಪ್ರಬಲಕೇಂದ್ರ ಪ್ರಬಲ ರಾಜ್ಯಗಳ ಅಗತ್ಯವಿದೆ.

**ಉದಯವಾಯಿತು**

ನೂತನ ಮೈಸೂರು ರಾಜ್ಯದ ಉದಯವನ್ನು ನವೆಂಬರ್ 1, 1956 ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದರು ವಿಧಿವತ್ತಾಗಿ ಬೆಂಗಳೂರಿನಲ್ಲಿ ಪ್ರಾರಂಭಿಸಿದ್ದರು. ಸಮಾರಂಭದಲ್ಲಿ ಕನ್ನಡದ ಹೆಸರಾಂತ ಗಾಯಕ ಶ್ರೀ ಪಿ. ಕಾಳಿಂಗರಾವ್‌ರವರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾಡನ್ನು ಸುಶ್ರಾವ್ಯವಾಗಿ ಹಾಡಿದ್ದರು. ಇದನ್ನು ಮೆಚ್ಚಿದ ರಾಷ್ಟ್ರಪತಿಯವರು ಕಾಳಿಂಗರಾಯರಿಗೆ ವೇದಿಕೆಯಲ್ಲಿ ನಗದು ಬಹುಮಾನ ನೀಡಿ ಸನ್ಮಾನಿಸಿದ್ದರು. ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ರಾಜ್ಯಪಾಲರಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯದ ಉಚ್ಚನ್ಯಾಯಾಲಯದ ಪ್ರಥಮ ಮುಖ್ಯ ನ್ಯಾಯಾಮೂರ್ತಿಯಾಗಿ ಜಸ್ಟೀಸ್ ಆರ್. ವೆಂಕಟರಾಮಯ್ಯ, ನ್ಯಾಯಮೂರ್ತಿಗಳಾಗಿ ಜಸ್ಟೀಸ್ ನಿಟ್ಟೂರು ಶ್ರೀನಿವಾಸರಾವ್ ಮತ್ತು ಜಸ್ಟೀಸ್ ಹೆಚ್. ಹೊಂಬೇಗೌಡರವರು ಪ್ರಮಾಣ ವಚನ ಸ್ವೀಕರಿಸಿದರು.

"ನಾವಿಂದು ನವಮೈಸೂರು" ರಾಜ್ಯ ಪ್ರಾರಂಭವನ್ನು ಅತ್ಯಂತ ಶುಭ ಸನ್ನಿವೇಶದಲ್ಲಿ ನೆರವೇರಿಸುತ್ತಿದ್ದೇವೆ. ರಾಷ್ಟ್ರಪತಿಯವರು ಇಂದು ನಮ್ಮೊಂದಿಗಿರುವುದು ಮಹತ್ವವಾಗಿದೆ ಎಂದು ನಿಯೋಜಿತ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನುಡಿದಿದ್ದರು.

ಡಾ. ರಾಜೇಂದ್ರಪ್ರಸಾದ್‌ರವರು ರಾಜ್ಯದ ನಿಯೋಜಿತ ಮಂತ್ರಿಮಂಡಲದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ "ನನ್ನ ಸಹಾನುಭೂತಿ ಸಂಪೂರ್ಣವಾಗಿ ನಿಮ್ಮೊಂದಿಗಿದೆ, ನಿಮ್ಮ ಮುಂದಿರುವ ಕೆಲಸ, ಸಮಸ್ಯೆಗಳು ಜಟಿಲವಾಗಿವೆ. ಇಂತಹ ಸಮಸ್ಯೆಗಳನ್ನು ನೀವು ಸಮಾಧಾನಕರವಾಗಿ ಪರಿಹರಿಸುವಿರೆಂದು ನನಗೆ ಭರವಸೆಯಿದೆ ಎಂದು ನುಡಿದಿದ್ದರು. ಪ್ರತ್ಯೇಕ ಕರ್ನಾಟಕ ರಾಜ್ಯ ರಚಿಸಲು ನಡೆದಿದ್ದ ಚಳುವಳಿಗೆ ಡಾ। ರಾಜೇಂದ್ರ ಪ್ರಸಾದ್‌ರವರು ಸಹಾನುಭೂತಿ ತೋರಿಸಿದ್ದ, ರಾಷ್ಟ್ರ ನಾಯಕರಲ್ಲಿ ಪ್ರಮುಖವಾಗಿದ್ದರು ಎಂದು ಎಸ್. ನಿಜಲಿಂಗಪ್ಪನವರು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿದ್ದರು.

ಶ್ರೀ ಎಸ್. ನಿಜಲಿಂಗಪ್ಪನವರು ನೂತನ ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಇದರೊಂದಿಗೆ ಹನ್ನೆರಡು ಸದಸ್ಯರ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡೀತು. ಮಂಗಳೂರಿನ ಎ.ಬಿ. ಶೆಟ್ಟಿ, ಕೊಡಗಿನ ಸಿ.ಎಂ. ಪೂಣಚ್ಚ, ಕಡಿದಾಳ್ ಮಂಜಪ್ಪ (out going CM) ಹೆಚ್. ಕೆ. ವೀರಣ್ಣ ಗೌಡ, ಎಂ.ವಿ. ರಾಮ ರಾವ್, ಆರ್. ಚೆನ್ನಗರಾಮಯ್ಯ, ಟಿ. ಮರಿಯಪ್ಪ, ಭೀಮಪ್ಪ ನಾಯಕ್, ಜಗನ್ನಾಥರಾವ್, ಹೆಚ್.ಎಸ್. ರುದ್ರಪ್ಪ ಮತ್ತು ಎಂ.ಪಿ. ಪಾಟೀಲ್‌ರವರು ಮಂತ್ರಿಮಂಡಲದಲ್ಲಿದ್ದರು. ಇದರಿಂದ ಕನ್ನಡಿಗರ ಬಹುಕಾಲದ ಕನಸು ನನಸಾಯಿತು. 1973ರಲ್ಲಿ ರಾಜ್ಯಕ್ಕೆ ಕರ್ನಾಟಕವೆಂದು ಡಿ. ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪುನರ್ ನಾಮಕರಣ ಮಾಡಲಾಯಿತು.

**"ನಾಡ ಬಾಂಧವರೇ,**

**ಕನ್ನಡ ಭಾಷೆ ಕಲಿಯಲು ಸುಲಭ, ಕನ್ನಡ ಭಾಷೆ ಮಾತನಾಡಲು ಸರಳ, ಕನ್ನಡದ ಲಿಪಿ ನೋಡಲು ಅಂದ, ಕನ್ನಡದ ಮಾತು ಕೇಳಲು ಚೆಂದ, ಕನ್ನಡ ಭಾಷೆಯ ಅಭಿವ್ಯಕ್ತಿ ಪ್ರಖರ ಮಾತ್ರವಲ್ಲ, ನಿಖರ ಕೂಡ.**

**ಭಾಷಾ ಲೋಕದಲ್ಲಿ ಕನ್ನಡಕ್ಕೆ ವಿಶೇಷ ಸ್ಥಾನವಿದೆ. ಕನ್ನಡ ನಾಡಿನಲ್ಲಿ ಜನಿಸಿರುವ, ಬಾಳಿ ಬದುಕುತ್ತಿರುವ ನಾವೆಲ್ಲ ಭಾಗ್ಯವಂತರು.**

**ಬಸವರಾಜ ಎಸ್. ಬೊಮ್ಮಾಯಿ**
**ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ**

# ಬಂಟರ ಸಂಘ ಬೆಂಗಳೂರು – ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ – "ದಕ್ಷ ಯಜ್ಞ" ಯಕ್ಷಗಾನ





ಸಂಘದ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ವತಿಯಿಂದ ದಿನಾಂಕ 02.10.2021ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ನಮ್ಮ ಸಂಘದ ಕಲಾವಿದರು ಮತ್ತು ಅತಿಥಿ ಕಲಾವಿದರೊಂದಿಗೆ ದಕ್ಷ ಯಜ್ಞ ಎಂಬ ಪ್ರಸಂಗವು ಪ್ರದರ್ಶಿಸಲ್ಪಟ್ಟಿತು.

ಕೋವಿಡ್ ಕಾಲಘಟ್ಟದಲ್ಲಿ ಸುಮಾರು ಒಂದೂವರೆ ವರ್ಷಗಳ ನಂತರ ಸಂಘದ ಆವರಣದಲ್ಲಿ ಚೆಂಡೆ ಸಪ್ಪಳದೊಂದಿಗೆ ಯಕ್ಷಗಾನದ ಪ್ರದರ್ಶನಗೊಂಡಿರುವುದು ಸದಸ್ಯರಾದ ನಮಗೆಲ್ಲರಿಗೂ ಅತೀವ ಸಂತಸವನ್ನುಂಟುಮಾಡಿದೆ.

ಪ್ರಾರಂಭದಲ್ಲಿ ನಡೆದ ಸಭಾಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಉಪಾಧ್ಯಕ್ಷರುಗಳಾದ ಶ್ರೀ ಕೊರ್ಗಿ ಭೋಜರಾಜ್ ಶೆಟ್ಟಿ ಮತ್ತು ಶ್ರೀಮತಿ ಅಮೃತಾ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರಿಮತಿ ಸೌಮ್ಯಪ್ರಿಯ ಹೆಗ್ಡೆಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಂಟರ ಸಂಘ ಬೆಂಗಳೂರು ಇವರು ನಡೆಸುತ್ತಾ ಬಂದಿರುವ ಹಲವಾರು ವರ್ಷಗಳ ಯಕ್ಷಗಾನ ಕಾರ್ಯಕ್ರಮಗಳಲ್ಲಿ ನಮ್ಮೊಂದಿಗೆ ಸಹಕರಿಸುತ್ತಾ ಬಂದಿರುವ ಯಕ್ಷ ಗುರುಗಳಾದ ಶ್ರೀ ಶಿವಕುಮಾರ್ ಬೇಗಾರ್, ಬಡಗುತಿಟ್ಟಿನ ಪ್ರಖ್ಯಾತ ಭಾಗವತರಾದ ಶ್ರೀ ಸುರೇಶ್ ಶೆಟ್ಟಿ ಶಂಕರನಾರಾಯಣ, ನಮ್ಮ ಸಂಘದ ಹೆಮ್ಮೆಯ ಯುವ ಭಾಗವತರಾದ ಶ್ರೀ ವಿನಯ ರಾಜೀವ ಶೆಟ್ಟಿ ಇವರನ್ನು ಹೃತ್ಪೂರ್ವಕವಾಗಿ ಶಾಲು ಮತ್ತು ಗೌರವ ಸ್ಮರಣಿಕೆಯನ್ನು ನೀಡಿ ಸನ್ಮಾನಿಸಲಾಯಿತು.

ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ಮುಖ್ಯಸ್ಥರಾದ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ ಮತ್ತು ಸಂಚಾಲಕಾರ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಮೂಡುಬಗೆಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಗುರುಪ್ರಸಾದ್ ಎನ್. ಹೆಗ್ಡೆಯವರು ಮಾತನಾಡುತ್ತಾ ಇಷ್ಟು ವರ್ಷಗಳ ಯಕ್ಷಗಾನದ ಪ್ರದರ್ಶನ ಮತ್ತು ಬೆಳವಣಿಗೆಗೆ ಸಹಕಾರ ನೀಡಿದ ಯಕ್ಷ ಕಲಾಭಿಮಾನಿಗಳನ್ನು ಮತ್ತು ಯಕ್ಷಗಾನದ ಪೋಷಕರು, ಮಹಾದಾನಿಗಳನ್ನು ಸ್ಮರಿಸಿದರು. ತಮ್ಮ ಅವಧಿಯಲ್ಲಿ ನಡೆದ **'ಯಕ್ಷತೋರಣ–I'** ಮತ್ತು **'ಯಕ್ಷತೋರಣ–II'** ಯಕ್ಷಗಾನ ಪ್ರದರ್ಶನಕ್ಕೆ ಸಹಕಾರವಿತ್ತ ಎಲ್ಲರನ್ನು ಮನಪೂರ್ವಕವಾಗಿ ಅಭಿನಂದಿಸಿ ಅವರೆಲ್ಲರ ಸಹಕಾರವನ್ನು ಮರು ನೆನಪಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಮಾತನಾಡುತ್ತಾ ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿಯ ಕಾರ್ಯವೈಖರಿಯನ್ನು ಶ್ಲಾಘಿಸಿದರು ಮತ್ತು ಯಕ್ಷಗಾನ ಪ್ರದರ್ಶನಗಳಿಗೆ ಬಯಲುರಂಗ ಮಂದಿರವನ್ನು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–2 ಆವರಣದಲ್ಲಿ ಒದಗಿಸುವುದಾಗಿ ಭರವಸೆಯಿತ್ತರು. ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಸದಸ್ಯೆಯಾದ ಶ್ರೀಮತಿ ರೇವತಿ ಶೆಟ್ಟಿಯವರು ನಿರ್ವಹಿದರು, ಸಂಚಾಲಕರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿಯವರ ಧನ್ಯವಾದದೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯಗೊಂಡಿತು.

ಅತಿಥಿ ಕಲಾವಿದರಾಗಿ ದಾಕ್ಷಾಯಿಣಿ ಪಾತ್ರದಾರಿ ಶ್ರೀ ಮನೋಜ್ ಭಟ್‌ರವರು, ನಮ್ಮ ಸಂಘದ ಖಜಾಂಚಿ ಶ್ರೀ ದೀಪಕ್ ಶೆಟ್ಟಿಯವರು ಈಶ್ವರನಾಗಿ, ಅನುಭವಿ ಕಲಾವಿದರಾದ ಶ್ರೀ ನವೀನ್ ಶೆಟ್ಟಿ ಐರ್‌ಬೈಲ್‌ರವರು ದಕ್ಷನಾಗಿ, ಶ್ರೀ ಚರಣ್ ಶೆಟ್ಟಿ, ಶ್ರೀ ದೇವದಾಸ್ ಶೆಟ್ಟಿ ಮಾರಾಳಿ, ಶ್ರೀ ಚಂದ್ರಶೇಖರ ಶೆಟ್ಟಿ ಕೊಡ್ಲಾಡಿ (ಹಾಸ್ಯಗಾರರಾಗಿ), ಶ್ರೀ ದಿನೇಶ್ ಶೆಟ್ಟಿ, ಶ್ರೀ ಕೃಷ್ಣಯ್ಯ ಶೆಟ್ಟಿಯವರು ವಿವಿಧ ಪಾತ್ರಗಳೊಂದಿಗೆ ರಂಗವೈಭವವನ್ನು ಸಾಕ್ಷಾತ್ಕರಿಸಿದರು. ಶ್ರೀ ಗುರುಪ್ರಸಾದ್ ಎನ್. ಹೆಗ್ಡೆಯವರು 'ಯಜ್ಞ ನಾರಾಯಣ'ನಾಗಿ ಹಲವಾರು ವರ್ಷಗಳ ಬಳಿಕ ಯಕ್ಷಗಾನ ರಂಗಕ್ಕೆ ಮರು ಪ್ರವೇಶ ಮಾಡಿದರು. ಹಿಮ್ಮೆಳದಲ್ಲಿ ಭಾಗವತರಾಗಿ ಶ್ರೀ ಸುರೇಶ್ ಶೆಟ್ಟಿ ಶಂಕರನಾರಾಯಣ ಮತ್ತು ನಮ್ಮ ಹೆಮ್ಮೆಯ ಶ್ರೀ ವಿನಯ್ ರಾಜೀವ ಶೆಟ್ಟಿಯವರು ತಮ್ಮ ಮಧುರ ಯಕ್ಷ ರಸದೌತಣವನ್ನು ಉಣಬಡಿಸಿದರು. ಚೆಂಡೆಯಲ್ಲಿ ಶ್ರೀ ಶ್ರೀನಿವಾಸ್ ಪ್ರಭು ಮತ್ತು ಮದ್ದಳೆಯಲ್ಲಿ ಶ್ರೀ ಅಕ್ಷಯ್ ಆಚಾರ್ ಬಿದ್ಕಲ್‌ಕಟ್ಟೆಯವರು ಸಹಕಾರವನ್ನಿತ್ತರು.

**ನಮ್ಮ ಕಾರ್ಯಕ್ರಮದ ಪ್ರಾಯೋಜಕರು;**

1. ಶ್ರೀ ದೀಪಕ್ ಶೆಟ್ಟಿ, ಖಜಾಂಚಿ ಬಂಟರ ಸಂಘ ಬೆಂಗಳೂರು
2. ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಬೆಂಗಳೂರು
3. ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು, ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಬೆಂಗಳೂರು
4. ಶ್ರೀ ನವೀನ್ ಶೆಟ್ಟಿ ಐರ್‌ಬೈಲ್, ಸದಸ್ಯರು ಬಂಟರ ಸಂಘ ಬೆಂಗಳೂರು
5. ಶ್ರೀ ಚಂದ್ರಶೇಖರ್ ಶೆಟ್ಟಿ ಕೊಡ್ಲಾಡಿ, ಸದಸ್ಯರು ಬಂಟರ ಸಂಘ ಬೆಂಗಳೂರು
6. ಶ್ರೀ ರತ್ನಾಕರ ಹೆಗ್ಡೆ, ಸದಸ್ಯರು ಬಂಟರ ಸಂಘ ಬೆಂಗಳೂರು

**ಮಧ್ಯಾಹ್ನದ ಉಟೋಪಚಾರ ನೀಡಿದವರು**

ಶ್ರೀ ಬಿ. ಆನಂದರಾಮ ಶೆಟ್ಟಿ, ಮಾಜಿ ಖಜಾಂಚಿ, ಬಂಟರ ಸಂಘ ಬೆಂಗಳೂರು

ಶ್ರೀ ಅಮರನಾಥ ಶೆಟ್ಟಿ, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಬೆಂಗಳೂರು

ಯಕ್ಷಗಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ನಮ್ಮನ್ನು ಪ್ರೋತ್ಸಾಹಿಸಿದ ಎಲ್ಲಾ ಯಕ್ಷಪ್ರೇಮಿಗಳಿಗೆ ವಂದಿಸುತ್ತಾ ಈ ವರದಿಗೆ ಮಂಗಳವನ್ನು ಹಾಡುತ್ತೇವೆ.

**ಸಂತೋಷ್ ಕುಮಾರ್ ಶೆಟ್ಟಿ ಮೂಡುಬಗೆ**
ಸಂಚಾಲಕರು, ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

**ಗುರುಪ್ರಸಾದ್ ಎನ್. ಹೆಗ್ಡೆ**
ಮುಖ್ಯಸ್ಥರು, ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

# ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ
# ಪ್ರತಿಭಾ ಪುರಸ್ಕಾರ ಹಾಗೂ ದತ್ತಿನಿಧಿ ಪ್ರಶಸ್ತಿ ವಿತರಣೆ




ಬಂಟ ಸಮಾಜದ ಮುಂದಿನ ಭವಿಷ್ಯ ಉಜ್ವಲ ಆಗಿರಬೇಕು ಅಂತಾದರೆ ಅದು ನಮ್ಮ ಮಕ್ಕಳಿಗೆ ಕೊಡಿಸುವ ಉತ್ತಮ ಶಿಕ್ಷಣದಿಂದ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಮೊತ್ತ ಮೊದಲ ಆದ್ಯತೆ ಸಿಗಬೇಕು ಎನ್ನುವುದು ಬಂಟರ ಸಂಘ ಬೆಂಗಳೂರಿನ ಮೂಲ ಉದ್ದೇಶ. ಅದೇ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿ ಅದರಿಂದ ಸಾವಿರಾರು ಜನರಿಗೆ ಉಪಯೋಗವಾಗುವಂತೆ ಮಾಡಿದೆ.

ಬೆಂಗಳೂರು ಬಂಟರ ಸಂಘದ ಸ್ಥಾಪಕರ ದಿನಾಚರಣೆಯ ಪ್ರಯುಕ್ತ 2020–21ನೇ ಸಾಲಿನ ದತ್ತಿನಿಧಿ ಪ್ರಶಸ್ತಿಗಳನ್ನು ಹಾಗೂ ಸಾಧನಾ ಪ್ರಶಸ್ತಿಗಳನ್ನು ದಿನಾಂಕ 02.10.2021ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಎನ್. ಶೇಖರ್ ಶೆಟ್ಟಿ, ನಿರ್ದೇಶಕರು, (ನಿ). ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕರ್ನಾಟಕ ಸರಕಾರ ಹಾಗೂ ಶ್ರೀ ಎಸ್. ಶೇಖರ್ ಶೆಟ್ಟಿ, ಹಿರಿಯ ವಕೀಲರು ಭಾಗವಹಿಸಿದ್ದರು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರುಗಳಾದ ಶ್ರೀ ಕೊರ್ಗಿ ಭೋಜರಾಜ್ ಹೆಗ್ಡೆ, ಶ್ರೀಮತಿ ಅಮೃತ ಎಸ್. ಶೆಟ್ಟಿ, ಗೌರವ

ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ದೀಪಕ್ ಶೆಟ್ಟಿಯವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 34 ಪ್ರತಿಭಾನ್ವಿತರಿಗೆ ದತ್ತಿನಿಧಿ ಪ್ರಶಸ್ತಿಗಳನ್ನು, 69 ಪ್ರತಿಭಾನ್ವಿತರಿಗೆ ಸಾಧನಾ ಪ್ರಶಸ್ತಿಗಳನ್ನು ವಿತರಿಸಲಾಯಿತು. 10 ನೇ ತರಗತಿಯಲ್ಲಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚಿನ ಸಾಧನೆಗೈದ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರಶಸ್ತಿ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ನೀಡಲಾಯಿತು.

ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಪೋಷಕರ ಕನಸಿಗೆ ಧಕ್ಕೆಯಾಗಬಾರದು, ಶಾಲಾ ಶುಲ್ಕಗಳಿಂದ ಪೋಷಕರು ಕಷ್ಟ ಅನುಭವಿಸುವಂತಾಗಬಾರದು ಎನ್ನುವ ಉದ್ದೇಶದೊಂದಿಗೆ ಜಾರಿಗೆ ತಂದ ವಿದ್ಯಾದೀವಿಗೆ ಯೋಜನೆಯಡಿಯಲ್ಲಿ 2020–21ನೇ ಸಾಲಿನಲ್ಲಿ ಸುಮಾರು 55 ಮಕ್ಕಳಿಗೆ 5,05,000 ಕ್ಕೂ ಅಧಿಕ ಮೊತ್ತದ ಸಹಾಯಧನ ನೀಡಲಾಗಿದೆ. ಭವಿಷ್ಯದ ದೃಷ್ಟಿಯಿಂದ ಈ ಯೋಜನೆ ಅತ್ಯಂತ ಮಹತ್ವದಾಗಿದ್ದು ಉತ್ತಮ ಶಿಕ್ಷಣದಿಂದ ನಮ್ಮ ಸಮಾಜದ ಮಕ್ಕಳು ವಂಚಿತರಾಗಬಾರದು ಎನ್ನುವ ನಮ್ಮ ಹಾರೈಕೆಗೆ ಮತ್ತಷ್ಟು ಬಲ ನೀಡಿದೆ.

ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುವ ನಿಟ್ಟಿನಲ್ಲಿ ಕಾಸರಗೋಡು, ಬ್ರಹ್ಮಾವರ, ಬೈಂದೂರು, ಶಿರೂರು ಮತ್ತಿತರ ಸ್ಥಳೀಯ ಬಂಟರ ಸಂಘಗಳ ಸಹಕಾರದೊಂದಿಗೆ ಉಚಿತ ವಿದ್ಯಾರ್ಥಿವೇತನ ಯೋಜನೆಯಡಿ ಸುಮಾರು 225 ವಿದ್ಯಾರ್ಥಿಗಳಿಗೆ ಸುಮಾರು 1,20,900 ರೂ.ಗಳ ವಿದ್ಯಾರ್ಥಿ ವೇತನ ನೀಡಿದೆ.

ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಮೆಡಿಕಲ್ ಹಾಗೂ ಇತರ ವೃತ್ತಿ ಶಿಕ್ಷಣ ಪಡೆಯುತ್ತಿರುವ ಸುಮಾರು 183 ವಿದ್ಯಾರ್ಥಿಗಳಿಗೆ ಸುಮಾರು 21,95,000 ರೂ.ಗಳ ಬಡ್ಡಿರಹಿತ ಸಾಲ ರೂಪದ ವಿದ್ಯಾರ್ಥಿ ವೇತನ ನೀಡಿದೆ.

ತೀರಾ ಅರ್ಥಿಕ ಸಂಕಷ್ಟದಲ್ಲಿರುವ ಕುಟುಂಬದ ವಿದ್ಯಾರ್ಥಿಗಳಿಗೆ ನೆರವಾಗುವ ಉದ್ದೇಶದಿಂದ ಸುಮಾರು 10 ಮಕ್ಕಳಿಗೆ 75000 ರೂ.ಗಳ ವರೆಗೆ ಆರ್ಥಿಕ ಸಹಾಯ ನೀಡಿದೆ.

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈಗಾಗಲೇ ಸುಮಾರು 8,70,000 ರೂ.ಗಳ ವಿದ್ಯಾರ್ಥಿ ವೇತನವನ್ನು ನೀಡಿದ್ದು, ಈ ಯೋಜನೆಯಲ್ಲಿ ಸಾಲೆತ್ತೂರು ಮತ್ತು ಪುಣ್ಚೂರು ಸಂಘಗಳಿಗೆ ಒಟ್ಟು 58,125 ರೂಗಳನ್ನು ನೀಡಲಾಗಿದೆ.

ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಸಂಚಾಲಕರಾದ ಶ್ರೀ ಉದಯ ಶೆಟ್ಟಿಯವರು ಕಾರ್ಯಕ್ರಮದ ವಂದನಾರ್ಪಣೆಯನ್ನು ಹಾಗೂ ನಿರೂಪಣೆಯನ್ನು ಸಂಘದ ಸದಸ್ಯರಾದ ಶ್ರೀಮತಿ ರೇವತಿ ಶೆಟ್ಟಿಯವರು ನಡೆಸಿಕೊಟ್ಟರು.

**ಉದಯ ಶೆಟ್ಟಿ**
ಸಂಚಾಲಕರು
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

**ಪ್ರವೀಣ್‌ಚಂದ್ರ ಶೆಟ್ಟಿ**
ಚೇರ್‌ಪರ್ಸನ್
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

ಆತ್ಮೀಯ ಸಮಾಜ ಬಾಂಧವರೇ,

ಸಂಘದ 2021–22 ನೇ ಸಾಲಿನ ಈ ಕೆಳಗಿನ ವಿವಿಧ ದತ್ತಿ ನಿಧಿ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.

1. ಶ್ರೀ ಸಿ.ಎಲ್. ನಾಯಕ್ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಇಂಜಿನೀಯರಿಂಗ್ ವಿದ್ಯಾರ್ಥಿ'
2. ಡಾ. ಕೆ.ಕೆ. ಹೆಗ್ಡೆ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿ'
3. ಶ್ರೀ ಮುಲ್ಕಿ ಸುಂದರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ವಾಣಿಜ್ಯ ವಿದ್ಯಾರ್ಥಿ'
4. ಶ್ರೀ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಸರ್ವತೋಮುಖ ಪ್ರತಿಭಾನ್ವಿತ ವಿದ್ಯಾರ್ಥಿನಿ'
5. ಶ್ರೀ ಚಾರ್ಮಕ್ಕಿ ನಾರಾಯಣ ಶೆಟ್ಟಿ ಪ್ರಶಸ್ತಿ – 'ಅತ್ಯುತ್ತಮ ಕಾನೂನು ವಿದ್ಯಾರ್ಥಿ'
6. ಶ್ರೀಮತಿ ಅಕ್ಕಯ್ಯ ಎನ್. ಶೆಟ್ಟಿ ಪ್ರಶಸ್ತಿ – 'ಅತ್ಯುತ್ತಮ ದಂತ ವೈದ್ಯಕೀಯ ವಿದ್ಯಾರ್ಥಿ'
7. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಪ್ರಶಸ್ತಿ – ಅತ್ಯುತ್ತಮ ಬಿ.ಎಸ್ಸಿ. (ಕೃಷಿ)/ ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ
8. ಶ್ರೀ ಎಚ್.ಟಿ. ಭಂಡಾರಿ ಪ್ರಶಸ್ತಿ – 'ಅತ್ಯುತ್ತಮ ಕ್ರೀಡಾ ವಿದ್ಯಾರ್ಥಿ'
9. ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಸ್ಮಾರಕ ಪ್ರಶಸ್ತಿ – ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ
10. ಶೀತಲ್ ಕೃಷ್ಣಪ್ಪ ಸ್ಮಾರಕ ಪ್ರಶಸ್ತಿ – 'ವಿವಿಧ ಕ್ಷೇತ್ರದಲ್ಲಿನ ಸರ್ವತೋಮುಖ ಪ್ರತಿಭೆ' ಗಾಗಿ (ವಿದ್ಯಾರ್ಥಿನಿ)
11. ಮಾಸ್ಟರ್ ಜಯಶೀಲ್ ಜಿ. ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಬಿ.ಇ.' (ಎಲೆಕ್ಟ್ರಾನಿಕ್ಸ್) ಅಥವಾ ಇತರೆ ವಿಷಯದಲ್ಲಿ 'ಇಂಜಿನಿಯರಿಂಗ್ ಪದವಿ'
12. ರಕ್ಷಾ ರೈ ಸ್ಮಾರಕ ಪ್ರಶಸ್ತಿ – 'ಶಾಸ್ತ್ರೀಯ ಸಂಗೀತ'ದಲ್ಲಿ ವಿಶೇಷ ಸಾಧನೆಗಾಗಿ
13. ಮುಲ್ಲದ್ ಲಕ್ಷ್ಮೀ ಶೀನಪ್ಪ ಶೆಟ್ಟಿ ಪ್ರಶಸ್ತಿ – 'ಅತ್ಯುತ್ತಮ ಪಶುವಿಜ್ಞಾನ ವಿದ್ಯಾರ್ಥಿ' ಅಥವಾ 'ಪಶುವಿಜ್ಞಾನ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ
14. ಶ್ರೀಮತಿ ಕೆಂಜೂರು ನಾಯ್ಕರ ಮನೆ ದೊಡ್ಡಕ್ಕ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿನಿ'
15. ಶ್ರೀ ಮಾರಾಳಿಮನೆ ಅನಂತ್ ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ನೇತ್ರ ವೈದ್ಯ' ಅಥವಾ 'ಯಾವುದೇ ವೈದ್ಯಕೀಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ'
16. ರಕ್ಷಾ ಎಂ. ಶೆಟ್ಟಿ ಸ್ಮಾರಕ ಪ್ರಶಸ್ತಿ – 'ಶಾಸ್ತ್ರೀಯ ನೃತ್ಯ' ದಲ್ಲಿನ ವಿಶೇಷ ಸಾಧನೆಗಾಗಿ
17. ಶ್ರೀ ಮೋಹನ್‌ದಾಸ್ ಎನ್. ಹೆಗ್ಡೆ ಸ್ಮಾರಕ ಪ್ರಶಸ್ತಿ – 'ಅತ್ಯುತ್ತಮ ಕಾನೂನು ವಿದ್ಯಾರ್ಥಿ'
18. ಶ್ರೀ ನಿಡ್ಡೋಡಿ ಪ್ರೇಮದಾಸ್ ಶೆಟ್ಟಿ ಸ್ಮಾರಕ ಪ್ರಶಸ್ತಿ – ' ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿ'

19. ಕೊಳ್ಕೆಬೈಲ್ ನಡುಮನೆ ಶ್ರೀಮತಿ ವನಜಾಕ್ಷಿ ಕರುಣಾಕರ ಶೆಟ್ಟಿ ಸ್ಮಾರಕ ಪ್ರಶಸ್ತಿ – ' ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿನಿ'
20. ವಂಡಾರು ತೆಂಕಬೆಟ್ಟು ಬಾಲಕೃಷ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – ವಾಣಿಜ್ಯ ವಿಷಯದಲ್ಲಿ ಪದವಿಗಳಿಸಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಅತ್ಯುತ್ತಮ ವಿದ್ಯಾರ್ಥಿನಿ
21. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ – ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳಲ್ಲಿನ ವಿಶೇಷ ಸಾಧನೆಗಾಗಿ
22. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ – ಕಲೆ, ಸಂಗೀತ, ನೃತ್ಯ, ಯಕ್ಷಗಾನ, ನಾಟಕ ಇತ್ಯಾದಿ ವಿಭಾಗಗಳಲ್ಲಿ ವಿಶೇಷ ಸಾಧನೆಗಾಗಿ
23. ದಿ। ಡಾ। ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ – ಕ್ರೀಡೆ, ಯೋಗ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ
24. ಶ್ರೀ ಕಿಶನ್ ಜಲಾಧರ ಶೆಟ್ಟಿ ಪ್ರಶಸ್ತಿ – ಅತ್ಯುತ್ತಮ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ಅಥವಾ ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ
25. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ – ಎಸ್.ಎಸ್.ಎಲ್.ಸಿ/ 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ
26. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ – ದ್ವಿತೀಯ ಪಿಯುಸಿ/ 12ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ
27. ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ ಸ್ಮಾರಕ ನಗದು ಪ್ರಶಸ್ತಿ – ಪಿಯುಸಿ, ಪದವಿ ಅಥವಾ ಇನ್ನಾವುದೇ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ (3 ಪ್ರಶಸ್ತಿಗಳು)
28. ದಿ। ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – ಪಿ.ಯು.ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ. (4 ಪ್ರಶಸ್ತಿಗಳು)
29. ದಿ। ಕೆ. ಎಸ್ ಹರ್ಷವರ್ಧನ್ ಶೆಟ್ಟಿ ಸ್ಮಾರಕ ಪ್ರಶಸ್ತಿ – ಪಿ.ಯು.ಸಿ, ಪದವಿ ಅಥವಾ ಇನ್ನಾವುದೇ ಶಿಕ್ಷಣ ಪಡೆಯುತ್ತಿರುವ ತಂದೆಯನ್ನು ಕಳೆದುಕೊಂಡಿರುವ ವಿದ್ಯಾರ್ಥಿ – (2 ಪ್ರಶಸ್ತಿಗಳು)

ಪ್ರಸಕ್ತ ಸಾಲಿನಲ್ಲಿ ಶಿಕ್ಷಣವನ್ನು ಪೂರೈಸಿದ ಈ ಮೇಲಿನ ಯಾವುದೇ ಪ್ರಶಸ್ತಿಗೆ ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿಯ ಪ್ರತಿ, ಇತ್ತೀಚಿನ ಭಾವಚಿತ್ರ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ದಿನಾಂಕ 31.12.2021 ರ ಒಳಗಾಗಿ ಸಂಘದ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2022 ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

## ಬಂಟರ ಸಂಘ ಬೆಂಗಳೂರು - ಸಾಂಸ್ಕೃತಿಕ ವಿಭಾಗ

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ - 2021-22

**ಸ್ಥಳ : ಬಂಟರ ಸಂಘದ ಆವರಣ**

**ದಿನಾಂಕ : 18.12.2021, ಶನಿವಾರ, ಮಧ್ಯಾಹ್ನ 02.30 ರಿಂದ**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ 16.12.2021**

1. **ರಂಗೋಲಿ (ಚುಕ್ಕಿ ರಂಗೋಲಿ) (RANGOLI - Powder Only)**

**ಪ್ರವೇಶ ಶುಲ್ಕ : ರೂ. 100/– ಪ್ರತಿ ವ್ಯಕ್ತಿಗೆ**

ಕಾಲಾವಕಾಶ : 45 ನಿಮಿಷ

ವಯೋಮಿತಿ : ಎ) 20 ವರ್ಷದ ಒಳಗೆ

ಬಿ) 20 ವರ್ಷ ಮೇಲ್ಪಟ್ಟು

* ಸ್ಪರ್ಧಿಗಳ ಸಂಖ್ಯೆ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

2. **ಚಿತ್ರ ಬಿಡಿಸುವುದು (DRAWING)**

**ಪ್ರವೇಶ ಶುಲ್ಕ : ರೂ. 100/– ಪ್ರತಿ ವ್ಯಕ್ತಿಗೆ**

ಕಾಲಾವಕಾಶ : 45 ನಿಮಿಷ

**ವಯೋಮಿತಿ** : ಎ) 6 ವರ್ಷದ ಒಳಗೆ

ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ

ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಡಿ) 16 ವರ್ಷ ಮೇಲ್ಪಟ್ಟು

---

**ದಿನಾಂಕ : 19.12.2021, ಭಾನುವಾರ, ಬೆಳಿಗ್ಗೆ 09.30 ರಿಂದ**

**ಸ್ಥಳ : ಬಂಟರ ಸಂಘದ ಆವರಣ**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ 16.12.2021**

1. **ಛದ್ಮವೇಷ (FANCY DRESS)**

**ಪ್ರವೇಶ ಶುಲ್ಕ : ರೂ. 100/–** **ಕಾಲಾವಕಾಶ : 2 ನಿಮಿಷ**

**ವಯೋಮಿತಿ** : ಎ) 6 ವರ್ಷದ ಒಳಗೆ

ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ

ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಡಿ 16 ವರ್ಷ ಮೇಲ್ಪಟ್ಟು

(ಹಿನ್ನೆಲೆ ಧ್ವನಿ / ಸಂಗೀತವನ್ನು ಪರಿಗಣಿಸಲಾಗುವುದು)

2. **ಆಶು ಭಾಷಣ (PICK & SPEECH) – ಕನ್ನಡ / English**

**ಪ್ರವೇಶ ಶುಲ್ಕ : ರೂ. 100/–** **ಕಾಲಾವಕಾಶ : 2 ನಿಮಿಷ**

**ವಯೋಮಿತಿ :** ಎ) 6 ವರ್ಷ ಮೇಲ್ಪಟ್ಟು 10 ವರ್ಷದ ಒಳಗೆ

ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ

ಡಿ) 30 ವರ್ಷ ಮೇಲ್ಪಟ್ಟು (ಕಾಲಾವಕಾಶ 3 ನಿಮಿಷ)

3. **ಸಂಗೀತ (MUSIC)**

**ಪ್ರವೇಶ ಶುಲ್ಕ : ರೂ. 100/–** ಪ್ರತಿ ವ್ಯಕ್ತಿಗೆ, **ರೂ. 200/–** ಪ್ರತಿ ಗುಂಪಿಗೆ

ಎ. **ಶಾಸ್ತ್ರೀಯ ಸಂಗೀತ–ಹಿಂದೂಸ್ಥಾನಿ / ಕರ್ನಾಟಿಕ – ಕಾಲಾವಕಾಶ 3 ನಿಮಿಷ**
**(Shastriya Sangeetha (Hindustani/ Karnatic)**

ವಯೋಮಿತಿ : ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ

ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಸಿ) 16 ವರ್ಷದ ಮೇಲ್ಪಟ್ಟು

**ಮಧ್ಯಾಹ್ನ 01.30 ರಿಂದ**

ಬಿ. **ಸುಗಮ ಸಂಗೀತ ಕಾಲಾವಕಾಶ 2 ½ ನಿಮಿಷ**

ಸಿ. **ಸಿನಿಮಾ ಗೀತೆಗಳು (Film Song) - ಕಾಲಾವಕಾಶ 2 ½ ನಿಮಿಷ**

**ವಯೋಮಿತಿ :** ಎ) 6 ರಿಂದ 10 ವರ್ಷದವರೆಗೆ

ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಸಿ) 16 ವರ್ಷ ಮೇಲ್ಪಟ್ಟು 25 ವರ್ಷದವರೆಗೆ

ಡಿ) 25 ವರ್ಷ ಮೇಲ್ಪಟ್ಟು

ಡಿ. **ಸಮೂಹ ಗಾನ (Group Song-Open for all- 3 members & above)**

**ಕಾಲಾವಕಾಶ 2 ½ ನಿಮಿಷ**

ಇ. **ಅಂತ್ಯಾಕ್ಷರಿ – ಹಿಂದಿ ಮತ್ತು ಕನ್ನಡ (Anthakshari – Hindi & Kannada) – ಸಂಜೆ 5.00 ರಿಂದ**

**ವಯೋಮಿತಿ :** ಮುಕ್ತ (ಪ್ರತೀ ತಂಡಕ್ಕೆ 3 ಸದಸ್ಯರು)

**ಪ್ರವೇಶ ಶುಲ್ಕ : ರೂ. 200/– ಪ್ರತೀ ತಂಡಕ್ಕೆ**

**ದಿನಾಂಕ 02.01.2022, ಭಾನುವಾರ, ಬೆಳಿಗ್ಗೆ 9.30 ರಿಂದ, ಸ್ಥಳ : ಬಂಟರ ಸಂಘದ ಆವರಣ**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ 30.12.2021**

**4. ನೃತ್ಯ (Dance)**

**1. ಶಾಸ್ತ್ರೀಯ ನೃತ್ಯ (Indian Classical Solo)** **2. ಜಾನಪದ ನೃತ್ಯ (Folk Solo)**
**3. ಫ್ರೀ ಸ್ಟೈಲ್ (Free- Style –Solo)** **4. ಜೋಡಿ ನೃತ್ಯ (Couple Dance-M & F)**
**5. ಸಮೂಹ ನೃತ್ಯ (Group Dance - 3 members & above - open)**

**ಪ್ರವೇಶ ಶುಲ್ಕ : ಎ) ಪ್ರತೀ ವ್ಯಕ್ತಿಗೆ – ರೂ. 100/– ಬಿ) ಪ್ರತೀ ತಂಡಕ್ಕೆ / ಜೋಡಿಗೆ ರೂ. 200/–**

| | **ವಯೋಮಿತಿ** | **ಕಾಲಾವಕಾಶ** |
|---|---|---|
| ಎ) | 6 ವರ್ಷ ಮೇಲ್ಪಟ್ಟು 10 ವರ್ಷದ ವರೆಗೆ | 2 + 1 ನಿಮಿಷ |
| ಬಿ) | 10 ವರ್ಷ ಮೇಲ್ಪಟ್ಟು 14 ವರ್ಷದವರೆಗೆ | 2 + 1 ನಿಮಿಷ |
| ಸಿ) | 14 ವರ್ಷ ಮೇಲ್ಪಟ್ಟು 18 ವರ್ಷದವರೆಗೆ | 2 + 1 ನಿಮಿಷ |
| ಡಿ) | 18 ವರ್ಷದ ಮೇಲ್ಪಟ್ಟು 35 ವರ್ಷದವರೆಗೆ | 2 + 1 ನಿಮಿಷ |
| ಇ) | 35 ವರ್ಷದ ಮೇಲ್ಪಟ್ಟು | 2 + 1 ನಿಮಿಷ |
| ಎಫ್) | ಜೋಡಿ ನೃತ್ಯ (ಮುಕ್ತ) | 2 + 1 ನಿಮಿಷ |
| ಜಿ) | ಸಮೂಹ ನೃತ್ಯ (ಮುಕ್ತ) | 2 + 1 ನಿಮಿಷ |

**(ಶಾಸ್ತ್ರೀಯ ನೃತ್ಯಕ್ಕೆ ಕಾಲಾವಕಾಶ – 3 +1 ನಿಮಿಷ)**

| | | | | | |
|---|---|---|---|---|---|
| ಚೇತನ್ ಶೆಟ್ಟಿ | – | 9880299389 | ಜಯರಾಮ ಶೆಟ್ಟಿ | – | 9901875904 |
| ಶೋಭಾ ಎನ್. ಶೇಖ | – | 9901885998 | ಉಮೇಶ್ ರೈ | – | 9035899044 |
| ಸುಚಿತ್ರ ಎ. ಶೆಟ್ಟಿ | – | 9663406333 | ರವೀಂದ್ರನಾಥ ಮಾರ್ಲ | – | 9845392696 |
| ಮೀರಾ ವಿ. ಶೆಟ್ಟಿ | – | 9972041130 | ಕೃತಿ ಶೆಟ್ಟಿ | – | 9686475434 |
| ಮಮತಾ ಪಿ. ಶೆಟ್ಟಿ | – | 9900087520 | ಮಹೇಶ್ ಶೆಟ್ಟಿ | – | 9980951966 |
| ಪ್ರಸಾದ್ ಶೆಟ್ಟಿ | – | 9845720219 | ಗೀತಾಂಜಲಿ ಎಸ್. ಶೆಟ್ಟಿ | – | 9449854330 |
| ಪ್ರಸನ್ನ ಶೆಟ್ಟಿ | – | 9880474995 | ಯೋಗ್ಯ ಎಲ್. ರೈ | – | 9980892311 |
| ಪೌರುಷ್ ಶೆಟ್ಟಿ | – | 9743711777 | ಅಮೂಲ್ಯ ಶೆಟ್ಟಿ | – | 8095537728 |

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- **ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು** ಸ್ವೀಕರಿಸಲಾಗುವುದಿಲ್ಲ. ನೋಂದಣಿಯನ್ನು ಮೊದಲೇ ಮಾಡಿಸಿದ್ದಲ್ಲಿ ಮಾತ್ರ ಪ್ರವೇಶ ಶುಲ್ಕವನ್ನು ಸ್ಥಳದಲ್ಲಿ ಸ್ವೀಕರಿಸಲಾಗುವುದು. ಸ್ಪರ್ಧೆಯ ವೇಳೆಯಲ್ಲಿ ಕಡ್ಡಾಯವಾಗಿ ರಶೀದಿಯನ್ನು ತೋರಿಸತಕ್ಕದ್ದು. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ**

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಉಪೇಂದ್ರ ಶೆಟ್ಟಿ ಆರ್.**
ಅಧ್ಯಕ್ಷರು

**ಪಿ. ಪ್ರಸಾದ್ ಶೆಟ್ಟಿ**
ಸಂಚಾಲಕ, ಸಾಂಸ್ಕೃತಿಕ ಸಮಿತಿ
ಮೊ: 9845605958

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಅಧ್ಯಕ್ಷರು, ಸಾಂಸ್ಕೃತಿಕ ಸಮಿತಿ
ಮೊ: 9845376085

# ಆಧುನಿಕತೆಯ ಪ್ರಭಾವ ಮತ್ತು ಪರಿಣಾಮಗಳು



ಪ್ರದೀಪ್ ಶೆಟ್ಟಿ ಬೇಳೂರು

ನಮಸ್ತೆ ಮಿತ್ರರೇ ಇಂದು ತಂತ್ರಜ್ಞಾನದ ಯುಗ, ಹುಟ್ಟಿದ ಎಳೆ ಕೂಸಿನಿಂದ ಹಿಡಿದು ವೃದ್ಧಾಪ್ಯದ ಅಜ್ಜ ಅಜ್ಜಿಯ ತನಕ ಆಧುನಿಕತೆಯ ಪ್ರಭಾವಕ್ಕೊಳಗಾಗಿರುವವರೆ. ಆದರೆ ಈ ತಂತ್ರಜ್ಞಾನ ಬೆಳೆಯುತ್ತಿರುವ ವೇಗದಲ್ಲಿ ನಾವುಗಳು ಹಿಂದೆ ಅಂದರೆ ಎರಡು ಮೂರು ದಶಕಗಳಿಂದ ಬದುಕುತ್ತಿದ್ದ ರೀತಿಯಲ್ಲಿ, ಸಂಬಂಧಗಳಿಗೆ ಕೊಡುತ್ತಿದ್ದ ಪ್ರಾಮುಖ್ಯತೆಯಲ್ಲಿ ಮಕ್ಕಳನ್ನು ಬೆಳೆಸುತ್ತಿದ್ದ ರೀತಿಯಲ್ಲಿ ಅಜಗಜಾಂತರ ವ್ಯತ್ಯಾಸ ಕಂಡು ಬರುತ್ತಿರುವುದರಲ್ಲಿ ಎರಡು ಮಾತಿಲ್ಲ.

ಮೊದಲು ಅವಿಭಕ್ತ ಕುಟುಂಬಗಳಿರುತ್ತಿದ್ದವು. ದಿನಕ್ಕೆ ಒಮ್ಮೆಯಾದರೂ ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡುವುದು, ಹರಟೆ ಹೊಡೆಯುವುದು, ಕಷ್ಟ ಸುಖಗಳನ್ನು ಹಂಚಿಕೊಂಡು ಸಮಯ ಕಳೆಯುತ್ತಿದ್ದರು. ಆದರೆ ಇಂದು ಅವಿಭಕ್ತ ಕುಟುಂಬಗಳು ಕಾಣಸಿಗುವುದೇ ವಿರಳ, ಸಿಕ್ಕರೂ ದಶಕಗಳ ಹಿಂದೆ ಇದ್ದ ಆದರೆ ಭಾಂದವ್ಯಗಳು ಕಾಣ ಸಿಗದಂತಹ ಪರಿಸ್ಥಿತಿ ಎದುರಾಗಿದೆ. ಏಕೆಂದರೆ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಮನೆಯ ಗೃಹಿಣಿಯರು ಸಂಜೆಯಾದರೆ ದೃಶ್ಯ ಮಾಧ್ಯಮದ ಮುಂದೆ ಕುಳಿತು ನೈಜ ಪ್ರಪಂಚವನ್ನೇ ಮರೆತು ಮನೆಯ ಮತ್ತು ಮನಸ್ಸಿನ ಸ್ವಾಸ್ಥ್ಯವನ್ನು ಕೆಡಿಸುವ ಧಾರಾವಾಹಿಗಳನ್ನು ನೋಡುತ್ತಾ ಕೂರುತ್ತಾರೆ. ಈ ಧಾರಾವಾಹಿಗಳು ಎಷ್ಟು ಪ್ರಭಾವ ಬೀರಿವೆ ಎಂದರೆ ರಾತ್ರಿ ಮಗುವಿಗೆ ಊಟ ಮಾಡಿಸಲು ಸಹ ಸಮಯದ ಅಭಾವ ಬಂದಿದೆ. ಮನೆಯ ಯಜಮಾನ ರಾತ್ರಿ ಮನೆಗೆ ಬಂದರು ಅವನ ಕಷ್ಟ ಸುಖ ವಿಚಾರಿಸಲು ಮನೆಯ ಒಡತಿಗೆ ಸಮಯವಿಲ್ಲದಂತಾಗಿದೆ.

ಇನ್ನು ಈ ಸಾಮಾಜಿಕ ಜಾಲತಾಣಗಳು ಮನುಷ್ಯನಿಗೆ ಕೃತಕ ಪ್ರಪಂಚವನ್ನೇ ಸೃಷ್ಟಿಸಿಬಿಟ್ಟಿವೆ. ಮನೆ ಮಂದಿಯೆಲ್ಲ ವಾಟ್ಸಾಪ್‌ನಲ್ಲಿ ಗುಂಪು ಮಾಡಿಕೊಂಡು ಕೃತಕ ನಗೆ ಬುಗ್ಗೆಗಳನ್ನು ಕಳುಹಿಸಿ ಖುಷಿಯ ಸಾಗರದಲ್ಲಿ ಮುಳುಗಿ ಹೊಡೆಯುತ್ತಿದ್ದಾರೆ. ಅದರಲ್ಲೂ ಯುವ ಪೀಳಿಗೆಯವರಾದ ನಾವುಗಳು ಸಾಮಾಜಿಕ ಜಾಲತಾಣಗಳನ್ನು ನಮ್ಮ ಮತ್ತೊಂದು ಜಗತ್ತೇ ಅನ್ನಿಸುವಷ್ಟು ಆವರಿಸಿಕೊಂಡಿದ್ದೇವೆ. ಆದರೆ ಅದರ ನಿಜವಾದ ಉಪಯುಕ್ತತೆ ಏನು ಎಂಬುವುದರ ಬಗೆಗೆ ಚಿಂತನೆ ನಡೆಸಬೇಕಾದ ಅಗತ್ಯತೆ ಇಂದು ಹೆಚ್ಚಿದೆ. ಏಕೆಂದರೆ ನಾವುಗಳೇ ಮುಂದಿನ ಪೀಳಿಗೆಯವರ ಆದರ್ಶ ವ್ಯಕ್ತಿಗಳಾಗಿ ಗುರುತಿಸಿಕೊಳ್ಳುವವರು. ಇಂದು ಗಂಡು ಹೆಣ್ಣು ತಂತ್ರಜ್ಞಾನ ಯುಗದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನರೇ. ಇಬ್ಬರಿಗೂ ಸಮಾನವಾದ ಅವಕಾಶಗಳಿವೆ. ಹೆಣ್ಣು ಮನೆಯ ಒಳಗಡೆ ಇರಬೇಕೆಂಬ ಯಾವ ನಿಯಮವೂ ಕೂಡ ಇಲ್ಲ. ಹೆಣ್ಣು ಕೂಡ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ತಮ್ಮ ಸಾಮರ್ಥ್ಯವನ್ನು ಈಗಾಗಲೇ ನಿರೂಪಿಸಿದ್ದಾರೆ. ಸಮಾನತೆಯ ನಡುವೆ ಮಾರಕ ಹವ್ಯಾಸಗಳನ್ನು ಅಳವಡಿಸಿಕೊಳ್ಳುತ್ತಿರುವುದು ಚಿಂತೆಗೀಡು ಮಾಡುವಂತಹದು. ನಮ್ಮ ಹೆತ್ತವರು ಅವರಿಂದಾಗುವಷ್ಟು ಒಳ್ಳೆಯ ಗುಣಗಳನ್ನು ನಮಗೆ ಧಾರೆಯೆರೆದಿದ್ದಾರೆ ಅದು ಅವರ ಕಾಲದಲ್ಲಿ ಶೈಕ್ಷಣಿಕವಾಗಿ ಅವರಿಗೆ ಬೇಕಾದಷ್ಟು ಸೌಲಭ್ಯಗಳ ಕೊರತೆಯ ನಡುವೆ. ಆದರೆ ಇಂದಿನ ಯುವ ಪೀಳಿಗೆ, ಗಂಡು ಹೆಣ್ಣು ಇಬ್ಬರೂ ಒಳ್ಳೆಯ ವಿದ್ಯಾಭ್ಯಾಸ ಪಡೆದು ಯಾವುದು ಸರಿ, ಯಾವುದು ತಪ್ಪು ಎನ್ನುವುದರ ಬಗೆಗೆ ನಿರ್ಧಾರ ಮಾಡಲು ಸಂಪೂರ್ಣ ಜ್ಞಾನವಿದೆ. ಇವೆಲ್ಲದರ ನಡುವೆ ಆಧುನಿಕತೆ ಎನ್ನುವ ಹೆಸರಿನಲ್ಲಿ ನಾವುಗಳು ಇಡುತ್ತಿರುವ ಹೆಜ್ಜೆ, ಹೋಗುತ್ತಿರುವ ಹಾದಿ ಮುಂದಿನ ಪೀಳಿಗೆಯವರಿಗೆ ನಾವು ಆದರ್ಶರಾಗಬಲ್ಲವೇ ಎಂಬುದು ಪ್ರಶ್ನಾರ್ಹ. ಹಾಗೆ ಮನುಷ್ಯರಲ್ಲಿ ಆಧುನಿಕತೆ ಮಾನವೀಯ ಮೌಲ್ಯಗಳನ್ನು ಕ್ಷೀಣಗೊಳಿಸುತ್ತಿದೆಯೆ ಎಂಬುದನ್ನು ಅವಲೋಕಿಸಬೇಕಾಗಿದೆ.



ಸಮುದಾಯ ಬಾಂಧವರೇ

ಮುಂಬರುವ ಬಂಟರ ಸಂಘದ ಆಡಳಿತ ಮಂಡಳಿಗೆ
ನಡೆಯುವ ಚುನಾವಣೆಯಲ್ಲಿ **ಅಧ್ಯಕ್ಷ** ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು
ತಮ್ಮೆಲ್ಲರ ಸಹಕಾರವನ್ನು ಬಯಸುವ

ಇಂತಿ ನಿಮ್ಮವ

**ಕೆ. ರತ್ನಾಕರ ಹೆಗ್ಡೆ**

ನಿವೃತ್ತ ಎಕ್ಸಿಕ್ಯೂಟಿವ್ ಡೈರೆಕ್ಟರ್ - ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ನಿವೃತ್ತ ಜನರಲ್ ಮ್ಯಾನೇಜರ್ - ವಿಜಯಾ ಬ್ಯಾಂಕ್
ಮೊ : 99800 08239

ADVT.



ಸಮುದಾಯ ಬಾಂಧವರೇ

ಮುಂಬರುವ ಬಂಟರ ಸಂಘದ ಆಡಳಿತ ಮಂಡಳಿಗೆ

ನಡೆಯುವ ಚುನಾವಣೆಯಲ್ಲಿ **ಉಪಾಧ್ಯಕ್ಷ** ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು

ತಮ್ಮೆಲ್ಲರ ಸಹಕಾರವನ್ನು ಬಯಸುವ

ಇಂತಿ ನಿಮ್ಮವ

**ಡಾ. ಜಗದೀಶ್ ವಿ. ಶೆಟ್ಟಿ**

ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ
2014-16 ಮತ್ತು 2016-2018
ಮೆಡಿಕಲ್ ಡೈರೆಕ್ಟರ್
ಪ್ರೀಮಿಯರ್ ಸಂಜೀವಿನಿ ಹಾಸ್ಪಿಟಲ್
ಮೊ : 99809 96039

# ಅಭಿನಂದನೆಗಳು



## ಶ್ರೀ ಕೆ. ಪ್ರಕಾಶ್ ಶೆಟ್ಟಿ

**ಚೇರ್‌ಮೆನ್, ಎಂ.ಆರ್.ಜಿ ಸಮೂಹ ಸಂಸ್ಥೆಗಳು**

**ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ಆಡಳಿತ ಮಂಡಳಿಯ ನೂತನ ಚೇರ್‌ಮೆನ್‌ರಾಗಿ ನೇಮಕಗೊಂಡ ತಮಗೆ ಹೃತ್ಪೂರ್ವಕ ಅಭಿನಂದನೆಗಳು.**

ಬೆಂಗಳೂರು ಬಂಟರ ಸಂಘದ ಯೋಜನಾ ಸಮಿತಿಯ ಚೇರ್‌ಮೆನ್‌ರಾಗಿ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಶೈಕ್ಷಣಿಕ ಯೋಜನೆಯನ್ನು ಸಮರ್ಥವಾಗಿ ಮುನ್ನಡೆಸಿರುತ್ತೀರಿ. ಇದೀಗ ತಮ್ಮ ನಾಯಕತ್ವದಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶೈಕ್ಷಣಿಕ ಸಂಸ್ಥೆಯು ಇನ್ನೂ ಉನ್ನತ ದರ್ಜೆಗೇರಲಿದೆ ಎನ್ನುವುದು ನಮ್ಮೆಲ್ಲರ ಆಶಯ.

| | |
|---|---|
| **ಮಧುಕರ ಎಂ. ಶೆಟ್ಟಿ** | **ಆರ್. ಉಪೇಂದ್ರ ಶೆಟ್ಟಿ** |
| ಗೌರವ ಕಾರ್ಯದರ್ಶಿ | ಅಧ್ಯಕ್ಷರು |

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರು ಬಂಟರ ಸಂಘ ಬೆಂಗಳೂರು

ಸ್ನೇಹ ಚಿಂತನೆ
ನವೆಂಬರ್ 2021




ADVT.

# 2020–21ನೇ ಸಾಲಿನ ದತ್ತಿ ನಿಧಿ ಪ್ರಶಸ್ತಿ ಪುರಸ್ಕೃತರು



**ಕುಮಾರಿ ವೀಕ್ಷಿತಾ ಶೆಟ್ಟಿ**
ಶ್ರೀ ಸಿ.ಎಲ್. ನಾಯಕ್ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ಇಂಜಿನೀಯರಿಂಗ್ ವಿದ್ಯಾರ್ಥಿ'



**ಡಾ. ಸಿಂಚನ**
ಡಾ. ಕೆ.ಕೆ. ಹೆಗ್ಡೆ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿ'



**ಕುಮಾರಿ ಶ್ಲಾಘ್ಯ ಆಳ್ವ ಕೆ.**
ಶ್ರೀ ಮುಲ್ಕಿ ಸುಂದರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ವಾಣಿಜ್ಯ ವಿದ್ಯಾರ್ಥಿ



**ಕುಮಾರಿ ಪ್ರಸುದಾ ಎಸ್. ಶೆಟ್ಟಿ**
ಶ್ರೀ ಅಮ್ಮಣ್ಣಿರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ಸರ್ವತೋಮುಖ
ಪ್ರತಿಭಾನ್ವಿತ ವಿದ್ಯಾರ್ಥಿನಿ'



**ಕುಮಾರಿ ಅನ್ವಿತಾ ಮನೋಹರ ರೈ**
ಶ್ರೀ ಚಾರ್ಮಕ್ಕಿ ನಾರಾಯಣ ಶೆಟ್ಟಿ ಪ್ರಶಸ್ತಿ –
'ಅತ್ಯುತ್ತಮ ಕಾನೂನು ವಿದ್ಯಾರ್ಥಿ'



**ಕುಮಾರಿ ಸ್ಮಿತಾ ಆರ್. ಶೆಟ್ಟಿ**
ಶ್ರೀಮತಿ ಅಕ್ಕಯ್ಯ ಎನ್. ಶೆಟ್ಟಿ ಪ್ರಶಸ್ತಿ –
'ಅತ್ಯುತ್ತಮದಂತ ವೈದ್ಯಕೀಯ ವಿದ್ಯಾರ್ಥಿ'



**ಕುಮಾರಿ ಸ್ವಾತಿ ಶೆಟ್ಟಿ ವೈ**
ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಪ್ರಶಸ್ತಿ –
ಅತ್ಯುತ್ತಮ ಬಿ.ಎಸ್ಸಿ. (ಕೃಷಿ) ವಿದ್ಯಾರ್ಥಿ



**ಶ್ರೀ ಅದ್ವಿತ್ ದಿನೇಶ್ ಶೆಟ್ಟಿ**
ಶ್ರೀ ಎಚ್.ಟಿ. ಭಂಡಾರಿ ಪ್ರಶಸ್ತಿ –
'ಅತ್ಯುತ್ತಮ ಕ್ರೀಡಾ ವಿದ್ಯಾರ್ಥಿ'




**ಕುಮಾರಿ ಆಪ್ತ ಶೆಟ್ಟಿ**
ಶೀತಲ್ ಕೃಷ್ಣಪ್ಪ ಸ್ಮಾರಕ ಪ್ರಶಸ್ತಿ – 'ವಿವಿಧ ಕ್ಷೇತ್ರದಲ್ಲಿನ
ಸರ್ವತೋಮುಖ ಪ್ರತಿಭೆ'ಗಾಗಿ (ವಿದ್ಯಾರ್ಥಿನಿ)





**ಶ್ರೀ ಪ್ರಖ್ಯಾತ್ ವೈ. ಬಿ. ಮತ್ತು ಪ್ರಣವ್ ವೈ. ಬಿ.**
ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಸ್ಮಾರಕ ಪ್ರಶಸ್ತಿ –
ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ



**ಶ್ರೀ ಶರುಣ್ ಎಸ್. ಶೆಟ್ಟಿ**
ಮಾಸ್ಟರ್ ಜಯಶೀಲ್ ಜಿ. ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ಬಿ.ಇ.' (ಎಲೆಕ್ಟ್ರಾನಿಕ್ಸ್) ಅಥವಾ
ಇತರೆ ವಿಷಯದಲ್ಲಿ 'ಇಂಜಿನಿಯರಿಂಗ್ ಪದವಿ'



**ಕುಮಾರಿ ಅನನ್ಯ ಎಚ್. ಶೆಟ್ಟಿ**

ರಕ್ಷಾ ರೈ ಸ್ಮಾರಕ ಪ್ರಶಸ್ತಿ –
'ಶಾಸ್ತ್ರೀಯ ಸಂಗೀತ'ದಲ್ಲಿ ವಿಶೇಷ ಸಾಧನೆಗಾಗಿ



**ಡಾ. ಶ್ರೇಯಾ ಶೆಟ್ಟಿ**

ಶ್ರೀಮತಿ ಕೆಂಜೂರು ನಾಯ್ಕರ ಮನೆ ದೊಡ್ಡಕ್ಕ
ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿನಿ'



**ಡಾ. ಅಕ್ಷತಾ ವಿ. ರೈ**

ಶ್ರೀ ಮಾರಾಳಿಮನೆ ಅನಂತ್ ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ವೈದ್ಯಕೀಯ
ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ'



**ಕುಮಾರಿ ಸನಿಹಾ ಶೆಟ್ಟಿ**

ರಕ್ಷಾ ಎಂ. ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಶಾಸ್ತ್ರೀಯ ನೃತ್ಯ'ದಲ್ಲಿನ ವಿಶೇಷ ಸಾಧನೆಗಾಗಿ



**ಶ್ರೀ ರೋಶಿತ್ ಡಿ.**

ಶ್ರೀ ಮೋಹನ್‌ದಾಸ್ ಎನ್. ಹೆಗ್ಡೆ ಸ್ಮಾರಕ ಪ್ರಶಸ್ತಿ –
'ಅತ್ಯುತ್ತಮ ಕಾನೂನು ವಿದ್ಯಾರ್ಥಿ'



**ಶ್ರೀ ಆಕಾಶ್ ಶೆಟ್ಟಿ**

ಶ್ರೀ ನಿಡ್ಡೋಡಿ ಪ್ರೇಮದಾಸ್ ಶೆಟ್ಟಿ ಸ್ಮಾರಕ ಪ್ರಶಸ್ತಿ –
'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿ'



**ಕುಮಾರಿ ಸ್ವಾತಿ ಶೆಟ್ಟಿ**

ಕೊಳ್ಕೆಬೈಲ್ ನಡುಮನೆ ಶ್ರೀಮತಿ ವನಜಾಕ್ಷಿ ಕರುಣಾಕರ ಶೆಟ್ಟಿ
ಸ್ಮಾರಕ ಪ್ರಶಸ್ತಿ – 'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿನಿ'



**ಕುಮಾರಿ ಚೈತ್ರ ಶೆಟ್ಟಿ**

ವಂಡಾರು ತೆಂಕಬೆಟ್ಟು ಬಾಲಕೃಷ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ –
ವಾಣಿಜ್ಯ ವಿಷಯದಲ್ಲಿ ಪದವಿ ಗಳಿಸಿ ಸ್ನಾತಕೋತ್ತರ ಪದವಿ
ವ್ಯಾಸಂಗ ಮಾಡುತ್ತಿರುವ ಅತ್ಯುತ್ತಮ ವಿದ್ಯಾರ್ಥಿನಿ



**ಶ್ರೀ ವಸಂತ ಶೆಟ್ಟಿ**

ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು
ದಿ। ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ –
ಕಲಾ ವಿಭಾಗಗಳಲ್ಲಿನ ವಿಶೇಷ ಸಾಧನೆಗಾಗಿ



**ಶ್ರೀ ಶರತ್ ಶೆಟ್ಟಿ**

ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ
ಆಳ್ವರವರ ಸ್ಮಾರಕ ಪ್ರಶಸ್ತಿ – ಕಲೆ, ಸಂಗೀತ, ನೃತ್ಯ, ಯಕ್ಷಗಾನ,
ನಾಟಕ ಇತ್ಯಾದಿ ವಿಭಾಗಗಳಲ್ಲಿ ವಿಶೇಷ ಸಾಧನೆಗಾಗಿ



**ಕುಮಾರಿ ಮಧುಶ್ರೀ ಎಸ್. ಶೆಟ್ಟಿ**

ದಿ। ಡಾ। ನಾಗಪ್ಪ ಆಳ್ವ ಮತ್ತು
ದಿ। ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ –
ಯೋಗ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ



**ಶ್ರೀ ಕೌಶಿಕ್ ಶೆಟ್ಟಿ**

ಶ್ರೀ ಕಿಶನ್‌ಜಲಾಧರ ಶೆಟ್ಟಿ ಪ್ರಶಸ್ತಿ –
ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ
(ಬಿ.ಫಾರ್ಮ್)



**ಕುಮಾರಿ ಸುರಭಿ ಎಸ್. ಶೆಟ್ಟಿ**

ಮಹಿಳಾ ವಿಭಾಗ ರಜತ ಸಂಭ್ರಮ
ಸ್ಮಾರಕ ಪ್ರಶಸ್ತಿ – ಎಸ್.ಎಸ್.ಎಲ್.ಸಿಯಲ್ಲಿ
ಅತೀ ಹೆಚ್ಚು ಅಂಕಗಳಿಸಿರುವ
ಅತ್ಯುತ್ತಮ ವಿದ್ಯಾರ್ಥಿನಿ



**ಕುಮಾರಿ ಅನ್ವಿತಾ ಶೆಟ್ಟಿ**

ಮಹಿಳಾ ವಿಭಾಗ ರಜತ ಸಂಭ್ರಮ
ಸ್ಮಾರಕ ಪ್ರಶಸ್ತಿ – ದ್ವಿತೀಯ ಪಿಯುಸಿಯಲ್ಲಿ
ಅತೀ ಹೆಚ್ಚು ಅಂಕಗಳಿಸಿರುವ
ಅತ್ಯುತ್ತಮ ವಿದ್ಯಾರ್ಥಿನಿ



**ಕುಮಾರಿ ತೃಪ್ತಿ**

ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ
ಸ್ಮಾರಕ ನಗದು ಪ್ರಶಸ್ತಿ – ಪಿಯುಸಿ ಶಿಕ್ಷಣ ಪಡೆಯುತ್ತಿರುವ
ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ



**ಶ್ರೀ ಸಾಹಿತ್ಯ**

ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ
ಸ್ಮಾರಕ ನಗದು ಪ್ರಶಸ್ತಿ – ಪದವಿ ಶಿಕ್ಷಣ ಪಡೆಯುತ್ತಿರುವ
ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ



**ಶ್ರೀ ಸಿದ್ಧಾರ್ಥ್ ಕೆ. ಶೆಟ್ಟಿ**

ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ
ಸ್ಮಾರಕ ನಗದು ಪ್ರಶಸ್ತಿ – ಪಿಯುಸಿ ಶಿಕ್ಷಣ ಪಡಯುತ್ತಿರುವ
ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ



**ಕುಮಾರಿ ಶಾರ್ವರಿ ರೈ ಕೆ. ಬಿ.**

ದಿ| ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – ಪಿ.ಯು.ಸಿಯಲ್ಲಿ
ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ.



**ಕುಮಾರಿ ಕೃಪಾಲಿ ಮಲ್ಲಿ**

ದಿ| ಶಕ್ತೀಶ್ ಶೆಟ್ಟಿ ಸ್ಮಾರಕ
ಪ್ರತಿಭಾ ಪುರಸ್ಕಾರ – ಪಿ.ಯು.ಸಿಯಲ್ಲಿ
ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ.



**ಕುಮಾರಿ ಸ್ತುತಿ ಕೆ. ಶೆಟ್ಟಿ**

ದಿ| ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – ಪಿ.ಯು.ಸಿಯಲ್ಲಿ
ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ.



**ಕುಮಾರಿ ವೈಷ್ಣವಿ**

ದಿ| ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – ಪಿ.ಯು.ಸಿಯಲ್ಲಿ
ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ.



**ಕುಮಾರಿ ಸಮೀಕ್ಷಾ ಎಸ್. ಶೆಟ್ಟಿ**

ದಿ| ಕೆ.ಎಸ್. ಹರ್ಷವರ್ಧನ್ ಶೆಟ್ಟಿ ಸ್ಮಾರಕ ಪ್ರಶಸ್ತಿ – ಪದವಿ ಶಿಕ್ಷಣ
ಪಡೆಯುತ್ತಿರುವ ತಂದೆಯನ್ನು ಕಳೆದುಕೊಂಡಿರುವ ವಿದ್ಯಾರ್ಥಿ



**ಕುಮಾರಿ ಅನುಷಾ**

ದಿ| ಕೆ.ಎಸ್. ಹರ್ಷವರ್ಧನ್ ಶೆಟ್ಟಿ ಸ್ಮಾರಕ ಪ್ರಶಸ್ತಿ – ವೃತ್ತಿಪರ ಶಿಕ್ಷಣ
ಪಡೆಯುತ್ತಿರುವ ತಂದೆಯನ್ನು ಕಳೆದುಕೊಂಡಿರುವ ವಿದ್ಯಾರ್ಥಿ



**ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ದತ್ತಿ ನಿಧಿ ಪ್ರಶಸ್ತಿ ವಿತರಣೆ**

**'ದಕ್ಷ ಯಜ್ಞ' – ಯಕ್ಷಗಾನ**



# BLESSING IN DISGUISE ON BUNTS FROM LAND REFORMS

There was a social and political clamour for distributing "land to the tiller" and the then prevailing sloganeering was an opportunity for the Indira Government to satisfy as large a number of people as feasible. In Karnataka, Chief Minister Devraj Urs found it an opportunity to prove his loyalty to Indira Gandhi by introducing land reforms in the 1970s. The people affected or benefited by them took it in their strides because by nature people in the State were of milder nature and relatively balanced. As much as economic, there were changes in social interpersonal relationships because of the caste system and the way people lived. Though, outwardly, the notion that was carried around was that the owners lost everything that mattered, if the impact of land reforms was dispassionately viewed and evaluated, the changes that took place affected were not that substantial, rather marginal, on different groups and sections of the society.

**Number-wise Tillers Larger Than Owners**

Simple statistics reveal that the number of landlords, including their families, was less than the number of families of tenant cultivators who by definition were the "tillers of the soil". Among the cultivating agriculturists, there were big, large, medium, and small and marginal cultivators and the owners were also of different size. Among the Bunts there were a large number of moola-geni (long-term lease holding families) and chala-geni (short-term lease holding families). All Bunts regardless of being landholders or leaseholders were following the aliyasanthana law. The property rights were generally held in the name of senior-most female member, on behalf of the joint family. As is known, some family acquired more land and became bigger landowners; some sold parts of landed property and turned out to be medium or small holders; and yet more, had to sell their property for the debt raised mortgaging their land. In a way, it was a mix of Bunts with diverse land-owning and tilling backgrounds. Obviously, number-wise, more people would benefit when such redistribution would take place based on the principle of "land to the tiller" because a large number people were actual cultivators and were in possession of the lands. Under the new reform law, they could make a "declaration" of the holdings in their possession and actually cultivate them. They could get orders in their favour though there was resistance from the technical rights of landholders.

Some landowners were not resisting much and remained docile. In fact, reformers like Aerya Lakshminarayana Alva of Aerya Beedu and the like supported the tillers. The Aerya Beedu had their landed properties spread over 5 villages and Mr Alva supported the tenants and facilitated the transfers. Landowners in many places remained docile for want of expertise or relevant knowledge and information to follow-up the cases. Further, among other factors/reasons, there were many inter-marriage relations between Bunt families on either side that prompted them to remain silent.

**Growth Sense in the 1960s**

A new development sense prevailed by the time the land reforms came into being. Since Independence in 1947 to mid-1960s there were significant, path-breaking and eye-opening developments which would have muted the earlier moods and perceptions of the people, especially of the generation in active life. Those were : the spread of education, economic development, community development, and legal basis of rights of family members. With the establishment of more schools and colleges in smaller towns and in bigger villages youngsters took to education more and more.

Under the planned economic development, there were social and economic activities, such as development of village roads, bridges, culverts, public transport, personal vehicles, transportation facilities and communications. In rural areas where most people thrive there was rural development through the community development in clusters of villages known as "blocks" under the National Extension Service. Through Grama Sevaks and other extension workers the Government agencies extended development services by way of improved agricultural techniques, use of chemical fertilizers, improved seeds to farming community, and advice on family planning, which facilitated women and child welfare.

Passing of the Hindu Succession Act earlier in 1956 started accelerating the pace of change. Under the legislation, followers of Aliyasanthana law like Bunts, would share their property on per capita basis which meant each member of the joint family, male or female, would be entitled to a per capita share. This paved the way for the wife and children of the aliyasanthana male member, after his death, to continue to live and pursue their vocations or professions where they had been born and brought up by their parents, without being obliged to move to mother's traditional family house. This was a landmark development for continuation of their activities in and around their father's house.

During the post-Independence period, castes considered lower, too rose higher and got better jobs in towns and in government schools and agencies. The society has started becoming more cohesive and inclusive. The social and economic multiplier effects were all-pervasive and comprehensive. The demonstration effects that emanated from the richer sections of the society to the lower layers had greater impact and the once-downtrodden, moved upwards and rose to be better off as years rolled by.

**Impact of Education**

Education has benefited many youngsters from all agricultural families. Children of landowners had taken to education in the 1930s onwards and the pace of their education accelerated and many were in government service, professions or business as they were not interested in agriculture and many of them were living all over Karnataka, Chennai and Bombay. Reforms or not, they were not interested in agriculture as deeply as in the earlier decades. Most importantly, the children of lease holding agriculturists took to education with great intensity and fervour that facilitated better incomes, support to relations, greater enlightenment and educational facilities and the new reform messages were spreading all over the area. Because the landowners had taken to education and outside engagements, others from villages could emulate them. The

brighter ones regardless of their financial backgrounds in the village, did well.

The people who remained behind in the villages too could have better job opportunities because the villages had "underemployment", the adverse effects of which gradually diminished. The people who remained in villages could compensate incomes by working in fields of landholders and live better. Many youngsters of both genders from olden tenant families are teachers and office professionals in the nearby towns. It is a pleasure to see in almost all villages children, women and men dressed much better than yesteryears. Even many were technology savvy and the youngsters have mastered information technology with many having iPhones extending support to agricultural operations and rural activities, be it festivals, marriages or whatever. A sense of equality and freedom could be seen in Canara districts, as in many parts of the country. The status symbol of the past yielded place to freedom of life in all its dimensions.

**Concluding Observations**

We could thus infer that the land reform in Karnataka has not done much of damage as it was made out to be. Viewed from overall perspective, it has benefited almost all sections. The fortuitous developmental benefits of the first two decades mitigated the adverse impacts and the people could find newer opportunities by the 1960s with greater confidence and look forward to take the changes in their strides. They made substantial flourish out of them. Change has been taken by people with a positive attitude and the reform coincided with congenial developments and in better socio-economic environment. Bunts and other tuluvas being a confident forward-looking community, found solace, as things were unfolding before them, and started moving to greener pastures of their choice.

**- Dr. K.U. Mada**

# ನನ್ನಾಸೆಗಳು

ಗೆಳೆಯ ಕೇಳಿಲ್ಲಿ ನನ್ನಾಸೆಗಳು ಬತ್ತಿಹೋಗಿವೆ
ಬರಗಾಲದಿ ಕೆರೆ ನೀರು ಇಂಗಿಹುವ ಹಾಗೆ
ಪಶುಪಕ್ಷಿಗಳ ಮೂಕ ವೇದನೆಗಳಿಗೆ ಸ್ಪಂದಿಸಬೇಕೆಂಬಾಸೆ
ಬಡವರ ಬದುಕಿಗೆ ಕವಿದಿರುವ ಕತ್ತಲೆಗೆ
ಹೊಸ ಬೆಳಕನಿಡುವ ಆಸೆ
ಓದುವ ಒತ್ತಡದಲ್ಲಿ ಬಾಲ್ಯದ ಮುಗ್ಧತೆಯನ್ನು ಮರೆಯುವ
ಚಿಣ್ಣರಿಗೆ ಆಸರೆಯಾಗುವ ಆಸೆ
ಆಧುನಿಕತೆಯ ನೆಪದಲ್ಲಿ ದುಶ್ಚಟಗಳಿಗೆ ದಾಸರಾಗುವ
ಯುವ ಪೀಳಿಗಿಗೆ ತಿಳಿಹೇಳುವ ಆಸೆ
ಮಕ್ಕಳ ಒಣಪ್ರತಿಷ್ಠೆಗೆ ಬಲಿಯಾಗಿ ವೃದ್ದಾಶ್ರಮ
ಸೇರುವ ಹೆತ್ತವರಿಗೆ ನೆರಳಾಗುವ ಆಸೆ
ಕೋಮುದಳ್ಳುರಿಯಲ್ಲಿ ಬೆಂದು ಮಾನವೀಯತೆಯನ್ನು
ಮರೆತಿರುವ
ಬಂಧುಗಳಿಗೆ ಕೊಂಡಿಯಾಗುವ ಆಸೆ
ಆಸೆ...ನೂರಾರು...ಆಸೆ
ಆದರೆ...ಏನು ಮಾಡಲಿ ಗೆಳೆಯ
ನನ್ನೆದೆಯಲ್ಲಿ ಯಾವುದೋ ದುಷ್ಯಕ್ತಿ ಪುಕ್ಕಲುತನದ
ತುಂಬಿಸಿದಂತಾಗಿ
ನನ್ನ ತೋಳುಗಳನ್ನು ಯಾವುದೋ ದುಷ್ಯಕ್ತಿ
ಹಿಡಿದೆಳೆಯುವಂತಾಗಿ
ತೋಳೆತ್ತಲು ಶಕ್ತಿಯಿಲ್ಲ, ಪ್ರತಿಭಟಿಸಲು ಧೈರ್ಯವಿಲ್ಲ
ಗೆಳೆಯ, ನನ್ನ ಈ ಕನಸುಗಳು ನನಸಾಗಬೇಕೆಂಬಾಸೆ
ಪ್ರಪಾತಕ್ಕೆ ಕುಸಿದಿರುವ ಮಾನವ ಬದುಕಿಗೆ
ಹೊಸ ಬೆಳಕಾಗಬೇಂಕೆಂಬಾಸೆ
ಆದರೆ...ಏನು ಮಾಡಲಿ ಗೆಳೆಯ...
ತಿಳಿ ಹೇಳಲು ಧೈರ್ಯವಿಲ್ಲ
ಹೇಳಿದರೂ ಕೇಳುವವರಿಲ್ಲ

**ಮುಲ್ಕಿ ಗುಂಡಾಲು ಹರಿಪ್ರಸಾದ್ ಶೆಟ್ಟಿ**

# ಕೊಂಕುಜೀವಿಯ ಮೆಲುಕು .... 2
# ಬೇಡವೆಂದರೂ ಬಿಡದೀ ಮಾಯೆ !



ಪ್ರಕಾಶ್ ಶೆಟ್ಟಿ

ಹೊಸ ಮಿಲೆನಿಯಂ ವರ್ಷ ಆರಂಭವಾಗಿತ್ತು. ಮಲಯಾಳ ಮನೋರಮ ಬಳಗದ 'ದಿ ವೀಕ್' ರಾಷ್ಟ್ರೀಯ ಇಂಗ್ಲಿಷ್ ವಾರ ಪತ್ರಿಕೆಯಿಂದ ಹೊರ ಬಂದು, ವಿಶಾಲವಾದ ಮೈದಾನದ ನಡುವೆ ನಿಂತು, ಮುಂದಿನ ಯೋಜನೆಗಳನ್ನು ಕಣ್ಮುಚ್ಚಿಕೊಂಡು ಚಿತ್ರಿಸತೊಡಗಿದೆ. ನಿಮಗೆ ಆಶ್ಚರ್ಯವಾಗಬಹುದು. ನಾನು ವ್ಯಂಗ್ಯ ಚಿತ್ರಗಳಿಂದ ದೂರ ಇರಬೇಕೆಂದು ನಿರ್ಧರಿಸಿಬಿಟ್ಟಿದ್ದೆ. ಅದರ ಬದಲು ನನಗೆ ಗೊತ್ತಿದ್ದ ಅಮೂಲ್ಯ ಪ್ರತಿಭೆ 'ಸ್ಪಾಟ್ ಕ್ಯಾರಿಕೇಚರ್'ನಿಂದಲೇ ಬದುಕಬೇಕೆಂದುಕೊಂಡೆ. (ಈ ಬಗ್ಗೆ ಹೆಚ್ಚಿನ ಸಂಗತಿಗಳನ್ನು ಮುಂದಿನ ಕಂತುಗಳಲ್ಲಿ ಓದಬಹುದು.) ಈಗ ನಾನು ಹೇಳಲಿಕ್ಕೆ ಹೊರಟಿರುವುದು ಕಾರ್ಟೂನ್ ನಂಟನ್ನೇ ಬಿಡಬೇಕೆಂದಿದ್ದವನಿಗೆ ಅದು ಹೇಗೆ ನನ್ನ ಬೆನ್ನ ಹಿಂದೆ ಬಿದ್ದಿತ್ತು ಎಂಬುದನ್ನು. ಕೊನೆಗೆ ನಾನು 'ಪ್ರಜಾವಾಣಿ'ಗೆ ಸೇರುವವರೆಗೂ ಅದು ಬಿಡಲಿಲ್ಲ!





ಕಾರ್ಟೂನ್ ಕಲೆ ನನ್ನ ಮಟ್ಟಿಗೆ ಒಂದು ಮಾಯೆ. ನಾನು ಬಿಡಬೇಕೆಂದಿದ್ದರೂ ಅದು ನನ್ನನ್ನು ಬಿಡಲಿಲ್ಲ. 'ದಿ ವೀಕ್' ಬಿಟ್ಟ ಮೇಲೂ ಕೆಲವು ವರ್ಷಗಳು ನಾನು ಎರ್ನಕುಳಂ ನಿವಾಸಿಯಾಗಿಯೇ ಇದ್ದೆ. ಭೂತ ಬಿಟ್ಟ ಭವಿಷ್ಯ ಏನಾಗುತ್ತಿದೆ ಅಂದುಕೊಳ್ಳುತ್ತಿರುವಾಗಲೇ ಕೇರಳದ ಅಂದಿನ ಪ್ರಸಿದ್ಧ ಟಿವಿ ಚಾನೆಲ್ ಏಷ್ಯಾ ನೆಟ್‌ನಲ್ಲಿ ಪ್ರತಿ ದಿವಸ ಮುಂಜಾನೆ ನನ್ನ 'ವರೆಯುಮ್ ಚಿರಿಯುಂ' ಎಂಬ ರಾಜಕೀಯ ಕಾರ್ಟೂನ್ ಪ್ರಸಾರವಾಗತೊಡಗಿತು. ಅದನ್ನು ಆರಂಭಿಸುವ ಮೊದಲು ನನ್ನ ಸಂದರ್ಶನವನ್ನೂ ಮಾಡಿದ್ದು ಒಬ್ಬ ವ್ಯಂಗ್ಯಚಿತ್ರಕಾರನಿಗೆ ಕೊಟ್ಟ ವಿಶೇಷ ಗೌರವವೆಂದೇ ನನ್ನ ಭಾವನೆ. ಅಚ್ಚರಿಯೆಂದರೆ ನನಗೆ ಮಲಯಾಳಂ ಸರಿಯಾಗಿ ಗೊತ್ತಿರಲಿಲ್ಲ. ಇದಕ್ಕಾಗಿ ನನ್ನ ಗೆಳೆಯರಾದ ಮಾಯಂ ಕುಟ್ಟಿ ಮತ್ತು ಮಾದವನ್ ಅವರಿಗೆ ಸಾಕಷ್ಟು ತೊಂದರೆ ಕೊಟ್ಟಿದ್ದು ನೆನಪು. ಹಾಗೇ ನಾನು ಮಲಯಾಳಂ ಬರೆಯುವುದನ್ನೂ ಕಲಿತೆ.

ಹೀಗೇ ಬೇಡವೆಂದರೂ ಅಂಟಿಕೊಂಡ ಕಾರ್ಟೂನ್ ಕಸುಬು ಅಥವಾ ಪತ್ರಿಕೆಗಳ ನಂಟು ವೆಬ್ ಲೋಗಂ, ಇಂಡಿಯನ್ ಎಕ್ಸ್ ಪ್ರೆಸ್, ದೇಶಾಭಿಮಾನಿ, ಮಲಯಾಳಂ ನ್ಯೂಸ್ ( ಗಲ್ಫ್ ) ಸ್ಪೋರ್ಟ್ಸ್ ವರ್ಲ್ಡ್ ಮಿಡ್ಲ್ ಈಸ್ಟ್ (ಗಲ್ಫ್ ) ಸಿಫಿ ಡಾಟ್ ಕಾಮ್, ವಿಜಯ ಕರ್ನಾಟಕ (ಡೊಂಕೇಶ) ವಾರ್ತಾ ಭಾರತಿ, ಕರಾವಳಿ ಮುಂಜಾವು, ಸ್ಟಾರ್ ಆಫ್ ಮೈಸೂರು ಇತ್ಯಾದಿ ಇತ್ಯಾದಿ ಪತ್ರಿಕೆಗಳ ಮೂಲಕ ಮುಂದುವರಿಯಿತು. ಬೆಂಗಳೂರಿಗೆ ನನ್ನ ಸವಾರಿ ಬಂದಿದ್ದೆ ತಡ ಈ ಟಿವಿಯಲ್ಲಿದ್ದ (ಅಂದಿನ ಬಹಳ ಜನಪ್ರಿಯ ಚಾನೆಲ್) ಜಿ.ಎನ್. ಮೋಹನ್, ನಿತ್ಯ ಸುದ್ದಿ ಜತೆ ಕಾರ್ಟೂನ್ ಗುದ್ದು ಕೊಡುವ ಅತ್ಯಪೂರ್ವ ಅವಕಾಶ ಕೊಟ್ಟರು. ಅದು 'ಪ್ರಕಾಶ್ ಶೆಟ್ಟಿ ಪಂಚ್'. ಆ ಭಾಗ್ಯ ಯಾರಿಗುಂಟು ಯಾರಿಗಿಲ್ಲ! ಕೆಲವರು ನನ್ನಲ್ಲಿ ಅಷ್ಟಕ್ಕೆ ಈ ಟಿವಿಯವರು ಎಷ್ಟು ಚಾರ್ಜ್ ಮಾಡ್ತಾರೆ? ಎಂದು ಕೇಳಿದವರೂ ಇದ್ದರು!

ನನ್ನ ಮೆಚ್ಚಿನ 'ಸಂಡೆ' 'ದಿ ಟೆಲಿಗ್ರಾಫ್'ನ ಎಂ. ಜೆ. ಅಕ್ಬರ್ 'ಕೊವರ್ಟ್' ಎಂಬ ಇಂಗ್ಲಿಷ್ ದ್ವೈ ಮಾಸಿಕ ತಂದಾಗ ಅದರಲ್ಲಿ ನನ್ನ ಕಾರ್ಟೂನ್, ಕ್ಯಾರಿಕೇಚರ್‌ಗಳ ಸಂತೆಯೇ ಇತ್ತು. ಈ ನಡುವೆ ಒಮ್ಮೆ 'ಔಟ್ ಲುಕ್' ರಾಷ್ಟ್ರೀಯ ಇಂಗ್ಲಿಷ್ ವಾರಪತ್ರಿಕೆಯ ಕಡೆಯಿಂದ ಆಹ್ವಾನ ಬಂದೇ

ಬಿಟ್ಟಿತು. ಆದರೆ ನಾನು ಮರಳಿ ಯಾವುದೇ ಪತ್ರಿಕೆಗೆ ಸೇರಬಾರದೆಂಬ ನಿರ್ಧಾರ ಗಟ್ಟಿ ಮಾಡಿಕೊಂಡಿದ್ದೆ. ಮುಂದೆ ಕೊಟ್ಟಾಯಂನ ರೆಸಾರ್ಟ್ ಒಂದರಲ್ಲಿ ಸಿಕ್ಕ 'ಗಲ್ಫ್ ನ್ಯೂಸ್'ನ ಮಾಲೀಕ – ಸಂಪಾದಕರು ನೇರ ಆಹ್ವಾನ ನೀಡಿದಾಗಲೂ ನಿರಾಕರಿಸಿದ್ದೆ! ನನ್ನ ತಲೆ ಕೆಟ್ಟಿರಬೇಕೆಂದು ನಿಮಗೆ ಅನಿಸಿರಬಹುದು. ಹಾಗೆ ನೋಡಿದರೆ ನಾನು 'ದಿ ವೀಕ್' ಬಿಟ್ಟದ್ದು ಕೇಳಿಯೇ ಅನೇಕರಿಗೆ ಹಾಗನಿಸಿತ್ತು. 'ಹಾಯ್ ಬೆಂಗಳೂರು'ನ ರವಿ ಬೆಳಗೆರೆ ಫೋರಮ್ ಮಾಲ್‌ನಲ್ಲಿ ನಾನು ಕ್ಯಾರಿಕೇಚರ್ ರಚಿಸುವುದನ್ನು ಕಂಡು, ಒಬ್ಬ ಸಂಪಾದಕನಾಗಿ 'ವಿಷಾದ' ವ್ಯಕ್ತಪಡಿಸಿ ಖಾಸ್ ಬಾತ್ ಬರೆದಿದ್ದರು. ನನ್ನ ನಿಲಕ್ಷ್ಯ ಭಾವಕ್ಕೆ ಕಾರಣವೊಂದೇ. ನನ್ನ ಜೈತ್ರ ಯಾತ್ರೆ. ಅದು ಕ್ಯಾರಿಕೇಚರ್ ಕಲೆಯನ್ನು ಸಾಮಾನ್ಯ ಜನರಿಗೆ ಮುಟ್ಟಿಸುವ ಅಸಾಮಾನ್ಯ ಯಾತ್ರೆಯಾಗಿತ್ತು. ಎಲ್ಲೋ ಅರ್ಧದಲ್ಲಿ ನಿಲ್ಲಿಸುವುದಕ್ಕೆ ನಾನದನ್ನು ಆರಂಭಿಸಿದ್ದೇ ಅಲ್ಲ.




ಅಂದು ಯಾವುದೋ ಕ್ಯಾರಿಕೇಚರ್ ಕಾರ್ಯಕ್ರಮ–ವೊಂದಕ್ಕೆ ಬೆಂಗಳೂರಿಗೆ ಬಂದಿದ್ದೆ. ಒಬ್ಬ ದಪ್ಪ ಮೀಸೆಯ ವ್ಯಕ್ತಿ ಬಹಳ ಆಸಕ್ತಿಯಿಂದ ನನ್ನೆದುರು ನಿಂತಿದ್ದರು. ಚಿತ್ರ ರಚಿಸಿದ ಮೇಲೆ ಅವರು ವಿಸಿಟಿಂಗ್ ಕಾರ್ಡ್ ಕೊಟ್ಟಾಗಲೇ ನನಗೆ ಗೊತ್ತಾಗಿದ್ದು ವ್ಯಕ್ತಿ 'ಪ್ರಜಾವಾಣಿ'ಯ ಕೆ. ಎನ್. ಶಾಂತಕುಮಾರ್ ಎಂದು! ನನ್ನ 80 ರ ದಶಕದ ದಿನಗಳಾಗಿದ್ದರೆ ಅವರಲ್ಲಿ ಸೇರಿಕೊಳ್ಳುವ ಆಸೆ ತೋಡಿಕೊಳ್ಳುತ್ತಿದ್ದೆನೋ! ಮುಂದೆ ಕೆಲ ವರ್ಷಗಳ ನಂತರ ಅವರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂತು. ಅವರ ವಿಸಿಟಿಂಗ್ ಕಾರ್ಡ್ ನನ್ನಲ್ಲಿರಲಿಲ್ಲ. ಸಂದರ್ಶನ ಕರೆಯ ಪತ್ರವಿತ್ತು.

ನನ್ನ ವೃತ್ತಿ ಜೀವನದಲ್ಲಿ ಆಕಸ್ಮಿಕಗಳು ನಡೆದದ್ದೇ ಕಡಿಮೆ. ಯಾಕೆಂದರೆ ನಾನೇ ಒಂದು ರೂಪು ರೇಷೆಯೊಂದಿಗೆ ನನ್ನ ಭವಿಷ್ಯದ ಯೋಜನೆಗಳನ್ನು ಸೃಷ್ಟಿಸುತಿದ್ದೆ. ಆದರೆ ಈ ವರೆಗೆ ಕೆಲಸ ಮಾಡಿದ ಎಲ್ಲಾ ಪತ್ರಿಕೆಗಳೂ ನನಗೆ ಆಕಸ್ಮಿಕವೇ! 'ಪ್ರಜಾವಾಣಿ'ಯೂ ಅಷ್ಟೇ. ಗೆಳೆಯ ಪಿ. ಮಹಮ್ಮದ್ ಅಲ್ಲಿಂದ ನಿರ್ಗಮಿಸದೇ ಇದ್ದಿದ್ದರೆ ನನ್ನ ವೃತ್ತಿ ಪಟ್ಟಿಯಲ್ಲಿ 'ಪ್ರಜಾವಾಣಿ' ಇರುತ್ತಿರಲಿಲ್ಲ. ಅದೇ ಹೊತ್ತಿಗೆ ನನ್ನ ಕ್ಯಾರಿಕೇಚರ್ ಜೈತ್ರ ಯಾತ್ರೆ ಕೂಡಾ ಕೊನೆಯ ಹಂತಕ್ಕೆ ಬಂದಿತ್ತು. ಹೊಸ ಯೋಜನೆಗೆ ಮುಂದಾಗಿದ್ದೆ. ನನ್ನ ಆತ್ಮೀಯ ಹಿರಿಯ ಗೆಳೆಯ ವ್ಯಂಗ್ಯಚಿತ್ರಕಾರ ಎಸ್. ಎಸ್. ಆನಂದ್ ಪ್ರಜಾವಾಣಿ ಜಾಹೀರಾತು ಬಗ್ಗೆ ಹೇಳಿದರು. ಮಾತ್ರವಲ್ಲ, 'ನೀವು ಸೇರಲೇಬೇಕು' ಎಂದು ಫರಮಾನು ಹೊರಡಿಸಿಯೇ ಬಿಟ್ಟರು! ಅವರ ಮುಂದಿನ ಸಲಹೆ. 'ಇಗೋ ಎಲ್ಲಾ ಬಿಟ್ಟುಬಿಡಿ ಪ್ರಕಾಶ್' ಅಂದರು. ಆಗಲೇ ನನಗೆ ಗೊತ್ತಾಗಿದ್ದು, ರಾಷ್ಟ್ರೀಯ ಇಂಗ್ಲಿಷ್ ವಾರಪತ್ರಿಕೆಯಿಂದ ರಾಜ್ಯ ಮಟ್ಟದ ದಿನಪತ್ರಿಕೆಗೆ ಸೇರಿದರೆ ಅದು 'ಜಂಪ್' ಆಗುವುದಿಲ್ಲ ಎಂದು. ಆದರೆ ನನ್ನ ಮಟ್ಟಿಗೆ ವಾಸ್ತವ ಸಂಗತಿ ಬೇರೆಯೇ ಆಗಿತ್ತು. ನಾನು 'ದಿ ವೀಕ್' ಬಿಟ್ಟಾಗಲೇ 'ಇಗೋ'ವನ್ನೂ ಬಿಡಲು ತೀರ್ಮಾನಿಸಿದ್ದೆ. ಅದನ್ನು ಹೊತ್ತುಕೊಂಡು ಎಲ್ಲೆಂದರಲ್ಲಿ ಕ್ಯಾರಿಕೇಚರ್ ಅಲೆದಾಟ ಮಾಡುವುದಕ್ಕೆ ಸಾಧ್ಯವೇ ಇರಲಿಲ್ಲ!

'ಪ್ರಜಾವಾಣಿ' ಎಲ್ಲಾ ರೀತಿಯಲ್ಲೂ ನನಗೆ ಹೊಸ ಅನುಭವವಾಯಿತು. 'ಮಲಯಾಳಂ ಮನೋರಮ'ದಂತಹ ದಿನಪತ್ರಿಕೆಯಲ್ಲಿನ ಕಾರ್ಯ–ವೈಖರಿ ನೋಡಿದ ನನಗೆ ಇಲ್ಲಿ ವಿಚಿತ್ರಗಳು ನಡೆಯುತ್ತಿರುವಂತೆ ಕಾಣುತಿತ್ತು. ತಮಾಷೆಯೆಂದರೆ ನನಗೆ ಇಲ್ಲಿನ ಕಾರ್ಯವೈಖರಿ ಅರ್ಥವಾಗಲು ಎರಡು ವರ್ಷಗಳು ಬೇಕಾಯಿತು. ಸಂಪಾದಕೀಯ ಬಳಗದಲ್ಲಿ ಅನೇಕರು ನನ್ನ ಕೆಲಸವನ್ನು 'ದಿ ವೀಕ್'ನಲ್ಲಿ ನೋಡಿರದ ಕಾರಣ ನಾನು ಅವರ ಕಣ್ಣಿನಲ್ಲಿ 'ಹೊಸಬ'ನೇ ಆಗಿದ್ದೆ.

'ಪ್ರಜಾವಾಣಿ'ಗೆ ನಾನು ಒಗ್ಗಿ ಕೊಳ್ಳಬೇಕಾಗಿತ್ತು. ಮುಖ್ಯವಾಗಿ ಅಲ್ಲಿನ ಕ್ಯಾಂಟೀನ್ ಊಟಕ್ಕೆ. ಕುಚ್ಚಲಕ್ಕಿ ಅನ್ನದಷ್ಟೇ ಬೆಳ್ತಕ್ಕಿ ಅನ್ನವೂ ಇಷ್ಟವಾಗತೊಡಗಿತು.

# ವಿಧಿಯೆಂಬ ಮಹಾಶಕ್ತಿಯನ್ನು ಯಾರು ಮೀರಲಾಗದು...?



ಅತ್ರಾಡಿ ಭೋಜರಾಜ ಎಲ್. ಹೆಗ್ಡೆ

ಮನೋನಿಶ್ಚಯ ಉಳ್ಳವರಿಗೆ ಪ್ರಯತ್ನಶೀಲರಿಗೆ ದುಸ್ತರವಾದುದು ಈ ಲೋಕದಲ್ಲಿ ಯಾವುದೂ ಇಲ್ಲ. ಈ ಸಂಸಾರದಲ್ಲಿ ನಿಶ್ಚಿತವೆಂಬುದು ಯಾವುದೂ ಇಲ್ಲ. ಜೀವನ ಚಕ್ರ ಉರುಳುತ್ತಲೇ ಇರುತ್ತದೆ. ಕರ್ಮಫಲವನ್ನು ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಮಹಾಭಾರತದ ಶಾಂತಿ ಪರ್ವದಲ್ಲಿ ಭೀಷ್ಮ ಶರಮಂಚದಲ್ಲಿ ಮಲಗಿರುವಾಗ ಹೇಳುತ್ತಾನೆ: ಮನುಷ್ಯನಿಗೆ ಗ್ರಹಸ್ಥಾಶ್ರಮವೇ ಬೇರೆಲ್ಲಾ ಆಶ್ರಮಗಳಿಗಿಂತ ಪುಣ್ಯತಮವಾದ ಸಿದ್ಧಿಕ್ಷೇತ್ರ, ಕಾಲಚಕ್ರದ ಸುಳಿಯಲ್ಲಿ ಮಾನವನ ಸುಖ, ಅಧಿಕಾರ, ಧನ, ಕಷ್ಟ, ನಷ್ಟ, ಬಡತನ, ಸಿರಿತನ ಯಾವುದೂ ಸ್ಥಿರವಲ್ಲ. ಮನುಷ್ಯ ಸುಖ ಬಂದಾಗ ಸೊಕ್ಕಿ ಮೆರೆಯುತ್ತಾನೆ, ಕಷ್ಟ ಬಂದಾಗ ಅರಗಿನಂತೆ ಕರಗಿ ಕೊರಗುತ್ತಾನೆ. ಹಗಲು ರಾತ್ರಿಗಳಂತೆ ನಮ್ಮ ಜೀವನದಲ್ಲಿ ಬಂದು ಹೋಗತಕ್ಕ ಇವನ್ನು ನಾವು ಹಗಲು ರಾತ್ರಿ ಸಂತೊಗ್ಗಿಸಿಕೊಂಡಂತೆ ಒಗ್ಗಿಸಿಕೊಳ್ಳಲಾಗದು. ಗಾಡಿಯ ಎರಡು ಚಕ್ರಗಳಂತೆ ಮಾನವನ ಭಾಗ್ಯ – ದೌರ್ಭಾಗ್ಯಗಳೆರಡೂ ಉರುಳುತ್ತಿರುತ್ತದೆ. ಈ ಉರುಳಾಟ ಯಾರೊಬ್ಬ ವ್ಯಕ್ತಿಯನ್ನೂ ಬಿಟ್ಟಿಲ್ಲ. ಆದರೆ ಮನಸ್ಸಿದ್ದರೆ ಮಾರ್ಗವೂ ಇದೆ. ಮಾರ್ಗದರ್ಶಕರೂ ಇದ್ದಾರೆ. ಸೃಷ್ಟಿಕರ್ತನಾದ ದೇವರು ನಮಗೆ ಈ ಅಮೂಲ್ಯವಾದ ಮಾನವ ಬದುಕನ್ನು ಕೊಟ್ಟು ಅದರೊಟ್ಟಿಗೆ ಮಾನವನಿಗೆ ಚಿಂತನೆ. ಮಂಥನ ಮಾಡುವ ವಿವೇಕ ವಿವೇಚನಾಶಕ್ತಿಯನ್ನು ಕೊಟ್ಟಿದ್ದಾನೆ. ಅವರವರ ಬದುಕಿನ ಉನ್ನತಿ ಹಾಗೂ ಅವನತಿ ಎರಡೂ ಅವರವರ ಕೈಯಲ್ಲೇ ಕೊಟ್ಟು ಬಿಟ್ಟಿದ್ದಾನೆ.

ಭಗವದ್ಗೀತೆಯಲ್ಲಿ ಒಂದು ಕಡೆ ಶ್ರೀ ಕೃಷ್ಣ ಹೇಳುತ್ತಾನೆ, "ತಪ್ಪು ಮಾಡುವುದು ಮಾನವನ ಸ್ವಭಾವ; ಕ್ಷಮಿಸುವುದು ದೈವತ್ವ" ಎಂದು, ಹಾಗೇ ನಾವೆಲ್ಲರೂ ಭಗವಂತನೆದುರಿಗೆ ಒಂದು ದೃಷ್ಟಿಯಲ್ಲಿ ತಪ್ಪಿತಸ್ಥರೇ. ಕಾರಣ, ಅಜ್ಞಾನದಲ್ಲಿರುವಾಗ ಮಾಡಬಾರದನ್ನೆಲ್ಲ ಮಾಡಿರುವೆವು. ಅದಕ್ಕಾಗಿ ಸುಮ್ಮನೆ ಕೂತು ಚಿಂತಿಸಬೇಕಾಗಿಲ್ಲ. ತಪ್ಪು ಮಾಡಿದ್ದಕ್ಕೆ ಪ್ರಾಯಶ್ಚಿತವೂ ಇದೆ. ಈ ಕಷ್ಟದ ದಿನಗಳಲ್ಲಿ ಮನವೆತ್ತ ಅಂದರೆ ಶಿವನತ್ತ ಎಂಬಂತೆ ನಮ್ಮಲ್ಲಿ ಅಜ್ಞಾನ ನೀಗಿಕೊಂಡಾಗ ನಮ್ಮಲ್ಲಿ ಎಲ್ಲಕ್ಕಿಂತ ಮೊದಲು ಅರಿವು ಮೂಡುತ್ತದೆ. ಹೃದಯದ ಅಂಧಕಾರ ನೀಗುತ್ತದೆ. ಮನಸ್ಸು ನಡೆ, ನುಡಿ, ಪರಿಶುದ್ಧವಾಗುತ್ತದೆ. ವ್ಯಕ್ತಿತ್ವ ವಿಕಸನವಾಗುತ್ತದೆ. ದುರಂಹಕಾರ, ದುರಾಭಿಮಾನ ನೀಗಿಕೊಂಡು ಜ್ಞಾನಿಯಾಗುತ್ತಾನೆ. ಆಗ ಎಲ್ಲರೂ ಹಿತಸಾಧನೆಯ ಗುರಿ ಹೊಂದುತ್ತಾರೆ. "ಲೋಕ ಸಮಸ್ತಾ ಸುಖಿನೋ ಭವಂತು ಸಮಸ್ತ ಸನ್ಮಂಗಳ ಭವಂತು" ಎಂಬ ಗುರಿಯೊಂದಿಗೆ ಜೀವಿತವಿಡೀ ಶ್ರಮಿಸಿ ತನ್ನ ಹುಟ್ಟು ಬದುಕು ಸಾರ್ಥಕಗೊಳಿಸುತ್ತಾನೆ.

ಈ ಪ್ರಪಂಚದಲ್ಲಿ ಯಾರೂ ಕೆಟ್ಟವರಿಲ್ಲ. ಆದರೆ ನಮ್ಮ ಮನದ ಭಾವನೆಯು ಕೆಟ್ಟದ್ದನ್ನು ಸೃಷ್ಟಿಸುತ್ತದೆ. ಆದ್ದರಿಂದ ಬಾಳು ವ್ಯರ್ಥವೆನ್ನದಿರಿ. ಬಾಳು ಗೋಳೆನ್ನದಿರಿ. ಶಾಂತಿ, ಸುಖ, ನೆಮ್ಮದಿ ಹೊರಗಿನಿಂದ ಸಿಗುವ ವಸ್ತುವಲ್ಲ. ಅದು ನಮ್ಮೊಳಗೇ ಇದೆ. ದೇವರು ಕೆಲವರನ್ನು ಪರೀಕ್ಷಿಸಿ ಕೊಡುತ್ತಾನೆ. ಕೆಲವರಿಗೆ ಕೊಟ್ಟು ಪರೀಕ್ಷಿಸುತ್ತಾನೆ. ಎಷ್ಟೋ ಜನರು ದೇವರೂ ನಮ್ಮ ಕೈ ಬಿಟ್ಟನೇ ಎಂದು ಗೋಳಾಡುವರು. ನಾವು ಗಟ್ಟಿಯಾಗಿ ಹಿಡಿದುಕೊಂಡರೆ ಅವನು ಬಿಡುವುದಾದರೂ ಹೇಗೆ? ನಮ್ಮ ಜನಕ್ಕೆ ದೇವರು ಮುನಿದಿರುವುದು ತಿಳಿಯುತ್ತದೆ. ದೇವರು ಒಲಿದಿರುವುದು ತಿಳಿಯುವುದಿಲ್ಲ. ಅಂತೂ ಭಕ್ತನಿಗೇನು ಬೇಕು ಎಂಬುದನ್ನು ಭಗವಂತನಿಗಿಂತ ಚೆನ್ನಾಗಿ ಬಲ್ಲವರಿಲ್ಲ. ನಮ್ಮ ಚಿಂತನೆಗಳು ಪವಿತ್ರವಾಗದೆ ನಮ್ಮ ಜೀವನ ಪವಿತ್ರವಾಗದು. ಜೀವನ ಪವಿತ್ರವಾಗದೆ ಶಾಂತಿ, ಸಹನೆ, ನೆಮ್ಮದಿ ದೊರಕದು. ಶಾಂತಿ, ಸಹನೆ, ಅನುಕಂಪಗಳಿರುವವರು ಮಾತ್ರ ಜೀವನದಲ್ಲಿ ಏನಾದರೂ

ಸಾಧಿಸಬಲ್ಲರು. ಮನ್ಮಥನು ದೇಹವನ್ನು ನೀಗಿಕೊಂಡನು. ಹರಿಶ್ಚಂದ್ರನು ಚಾಂಡಾಲನ ಸೇವಕನಾದನು. ಬ್ರಹ್ಮನು ತನ್ನ ಒಂದು ತಲೆಯನ್ನೇ ಕಳಕೊಂಡನು. ಶುಕ್ರಾಚಾರ್ಯರ ಒಂದು ಕಣ್ಣು ಕುರುಡಾಯಿತು. ನಳ ಚಕ್ರವರ್ತಿ ಕುದುರೆ ಲಾಯದಲ್ಲಿ ಸೇವಕನಾದನು. ಶ್ರೀ ರಾಮಚಂದ್ರನು ತನ್ನ ಪತ್ನಿಯನ್ನೇ ಕಳಕೊಂಡನು. ಹೀಗೆ ಕೆಲವು ಪುರಾಣ ಘಟನೆಗಳು ವಿಧಿಯನ್ನು ಮೀರಲಾಗದ ಮಹಾಪುರುಷರ ಉದಾಹಣೆಗಳನ್ನು ನಮಗೆ ಕೊಡುತ್ತವೆ. ವಿಧಿಯನ್ನು ಮೀರಲಾಗದ ನಾವು ಹರ ಹರಾ ಶ್ರೀ ಚೆನ್ನ ಸೋಮೇಶ್ವರಾ ಎನ್ನುತ್ತಾ ಎಲ್ಲಾ ಶಕ್ತಿಗಳನ್ನೂ ಮೆಟ್ಟಿ ನಿಲ್ಲಬೇಕು. ಆ ಮಹಾಶಕ್ತಿಯನ್ನು ನಾವು ವಿಧಿ ಎಂದು ಹೇಳದೇ ಬೇರೆ ವಿಧಿ ಇಲ್ಲ.

# ಬೆಳ್ಳಂಪಳ್ಳಿ ಪುಣ್ಚೂರು ಬಂಟರ ಸಂಘ ಉದ್ಘಾಟನೆ




ಯಾವುದೇ ಕ್ಷೇತ್ರದಲ್ಲೂ ಅಭಿವೃದ್ಧಿ ಕಾಣಬೇಕಾದರೆ ಅಲ್ಲಿ ಬಂಟ ಸಮಾಜದವರು ಪ್ರಮುಖ ಪಾತ್ರ ವಹಿಸುತ್ತಾರೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶದ ತನಕವೂ ಬಂಟರು ಇರದ ಕ್ಷೇತ್ರವಿಲ್ಲ. ಅದೇ ರೀತಿ ನಮ್ಮ ಸಮಾಜದಲ್ಲಿರುವ ಬಡವರನ್ನು ಗುರುತಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸ ಬಂಟ ಸಂಘಗಳಿಂದ ಆಗಬೇಕು ಎಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಐಕಳ ಹರೀಶ್ ಶೆಟ್ಟಿಯವರು ಹೇಳಿದರು.

ಅವರು ಅಕ್ಟೋಬರ್ 24ರಂದು ಪುಣ್ಚೂರು ಶಾರದಾ ಫಾರ್ಮ್‌ನಲ್ಲಿ ನಡೆದ ಬೆಳ್ಳಂಪಳ್ಳಿ ಪುಣ್ಚೂರು ಬಂಟರ ಸಂಘವನ್ನು ಉದ್ಘಾಟಿಸಿ ಯೋಗ ಸಾಧಕಿ ಶಿವಾನಿ ಶೆಟ್ಟಿ ಅವರನ್ನು ಸಮ್ಮಾನಿಸಿ ಮಾತನಾಡಿದರು. ಬಂಟರ ಸಂಘದ ನೂತನ ಲಾಂಛನವನ್ನು ಗೋವಾ ಬಂಟರ ಸಂಘದ ಅಧ್ಯಕ್ಷ ಮುರುಳಿ ಮೋಹನ್ ಶೆಟ್ಟಿ ಅನಾವರಣಗೊಳಿಸಿದರು.

ಬೆಳ್ಳಂಪಳ್ಳಿ ಪುಣ್ಚೂರು ಬಂಟರ ಸಂಘದ ಅಧ್ಯಕ್ಷ ಶ್ರೀ ಬಿ. ಅಶೋಕ್ ಕುಮಾರ್ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ನಡೆಯಿತು. ಸಮಾರಂಭದಲ್ಲಿ ಬೆಂಗಳೂರು ಬಂಟರ ಸಂಘದ ಕೋಶಾಧಿಕಾರಿ ಶ್ರೀ ದೀಪಕ್ ಶೆಟ್ಟಿಯವರು, ಜಾಗತಿಕ ಬಂಟರ ಸಂಘದ ಕಾರ್ಯದರ್ಶಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಬಂಟರ ಯಾನೆ ನಾಡವರ ಮಾತೃ ಸಂಘದ ಸಂಚಾಲಕರಾದ ಶ್ರೀ ಜಯರಾಜ್ ಹೆಗ್ಡೆ, ಉದ್ಯಮಿ ಶ್ರೀ ಸುರೇಶ್ ಶೆಟ್ಟಿ ಗುರ್ಮೆ, ಹೆಬ್ರಿ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಉದಯ ಶೆಟ್ಟಿ ಮುನಿಯಾಲು ಮತ್ತಿತರರು ಭಾಗವಹಿಸಿದರು.

# ಮಹಿಳಾ ವಿಭಾಗ ಸಾದರ ಪಡಿಸಿದ ಸರಳ ದಸರಾ ಆಚರಣೆ



"ಧರ್ಮೋ ರಕ್ಷತಿ ರಕ್ಷಿತ:" ನಮ್ಮ ಆಚರಣೆಗಳಿಗೆ ಸಾಕ್ಷೀಭೂತವಾಗಿ ನಿಲ್ಲತಕ್ಕಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ದಸರಾ ಹಬ್ಬ ವಿಶೇಷವೂ, ವೈಶಿಷ್ಟಪೂರ್ಣವೂ ಮಾತ್ರವಲ್ಲ ನಮ್ಮ ಮನೋಧರ್ಮವನ್ನು ಶಾಂತಿ, ಸಮಾಧಾನ, ಸಂತೋಷದೊಂದಿಗೆ ವಿಜೃಂಭಿಸುವ ಸಕಾಲವೂ ಹೌದು. ಕಳೆದ ದಿನಾಂಕ 12.10.2021ರಂದು ಬಂಟರ ಸಂಘದ ಸಂಕೀರ್ಣದಲ್ಲಿ ಬೆಂಗಳೂರು ಬಂಟರ ಸಂಘದ ಮಹಿಳಾ ವಿಭಾಗ ಸಾಂಕೇತಿಕವಾಗಿ, ಸರಳ ದಸರಾ ಆಚರಿಸಬೇಕಾದ ಅನಿವಾರ್ಯತೆ (ಕೋವಿಡ್ ನಿಯಮಾವಳಿಗೆ ಒಳಪಟ್ಟು) ಹೆಚ್ಚಿನ ಸದಸ್ಯ ಬಾಂಧವರ ಭಾಗವಹಿಸುವಿಕೆಗೆ ತಡೆಯೊಡ್ಡಿತು.

ಮಹಿಳಾ ವಿಭಾಗ ಸಂಘದ ಭೋಜನ ಶಾಲೆಯನ್ನು ಯಜ್ಞವೋ, ಯಾಗವೋ ಎಂಬಂತೆ ಶೃಂಗರಿಸಿ, ಮಾತೃ ಸ್ವರೂಪಿಣಿ ಜಗನ್ಮಾತೆಯ ಪ್ರತಿಷ್ಠಾಪನೆಯನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಬಿಂಬಿಸಿ, ಮಾಲಾ ಶೆಟ್ಟಿಯವರು ರಚಿಸಿದ ಸುಂದರ ರಂಗೋಲಿಯ ವಿನ್ಯಾಸ ಶೃಂಗಾರಕ್ಕೆ ಮೆರುಗನ್ನಿತ್ತಿತು. ಅನಿತಾ ಭಂಡಾರಿ ಹಾಗೂ ಸಬಿತ ಮಲ್ಲಿಯವರು ಸಹಕರಿಸಿದರು. ಮಹಿಳಾ ವಿಭಾಗದ ಕೆಲವು ಸದಸ್ಯರ ಪ್ರಾರ್ಥನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.

ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈಯವರು ಆಗಮಿಸಿದ ಸಂಘದ ಅಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ, ಪ್ರಾಸ್ತಾವಿಕ ಹಬ್ಬದ ವಿವರಣೆ ನೀಡುತ್ತಾ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರನ್ನು, ಮಾಜಿ ಅಧ್ಯಕ್ಷರು ಹಾಗೂ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರನ್ನು, ಜೊತೆಯಲ್ಲಿ ಮಹಿಳಾ ವಿಭಾಗ ಹಾಗೂ ನೆರೆದ ಮಹಿಳೆಯರನ್ನು ಆದರ ಅಭಿಮಾನದಿಂದ ಸ್ವಾಗತಿಸಿ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಾದರ ಪಡಿಸಲಿರುವ ತಂಡದ ಸದಸ್ಯರೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಸರಳ ಸಮಾರಂಭವನ್ನು ಸಂಘದ ಚಿಂತನಶೀಲ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ತನ್ನ ತಂಡದೊಂದಿಗೆ ವಿದ್ಯುಕ್ತವಾಗಿ ಉದ್ಘಾಟಿಸಿ ಹಿತನುಡಿಗಳನ್ನಾಡಿದರು. ಉಪಾಧ್ಯಕ್ಷರಾದ ಶ್ರೀ ಕೊರ್ಗಿ ಭೋಜರಾಜ್ ಶೆಟ್ಟಿ, ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಅಮೃತ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ಶ್ರೀ ದೀಪಕ್ ಶೆಟ್ಟಿಯವರ ಉಪಸ್ಥಿತಿ ಎದ್ದು ಕಾಣುತ್ತಿತ್ತು.

ಸಂಘದ ಕ್ರಿಯಾಶೀಲ ಸದಸ್ಯೆ ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ ಮತ್ತು ತಂಡದಿಂದ ಭಜನೆ, ಶ್ರೀಮತಿ ಆಶಾ ಶೆಟ್ಟಿ, ಶ್ರೀಮತಿ ಶೋಭಾ ರೈಯವರ ಲಲಿತ ಸಹಸ್ರನಾಮ ಹಾಗೂ ಶ್ರೀಮತಿ ದೀಪಾ ಶೆಟ್ಟಿ ಮತ್ತು ಅಕ್ಷತಾ ಶೆಟ್ಟಿಯವರಿಂದ ದೇವರ ನಾಮ ಸುಮಾರು ಒಂದು ಘಂಟೆಗಳ ಕಾಲ ನಿರರ್ಗಳವಾಗಿ ನಡೆಯಿತು.

ವಿಶೇಷವಾಗಿ ನಮ್ಮ ಸಂಘದ ಸದಸ್ಯೆಯರು ಸಾದರ ಪಡಿಸಿದ ದಾಂಡಿಯ ನೃತ್ಯ ಶ್ರೀ ವರಸಿದ್ಧಿ ವಿನಾಯಕನ ಸನ್ನಿಧಿಯಲ್ಲಿ ನಡೆಯಿತು. ದೈವೀ ಕೃಪೆಯೆಂಬಂತೆ ಧಾರಾಕಾರ ಮಳೆ ಸುರಿಯುತ್ತಿದ್ದರೂ ನಮ್ಮ ಕಾರ್ಯಕ್ರಮಕ್ಕೆ ಏನೇನು ಅಡಚಣೆ, ಆತಂಕವಿಲ್ಲದೆ ಅನೂಚಾನಾಗಿ ನಡೆದು ಮಹಿಳೆಯರು ಸಂತಸದ ನಿಟ್ಟುಸಿರು ಬಿಟ್ಟಿರುವುದು ಅತಿಶಯೋಕ್ತಿಯಲ್ಲ. ನೃತ್ಯ ಸಂಯೋಜನೆಯನ್ನು ಕುಮಾರಿ ಪ್ರಣಾಮ್ಯ ಅಜಿಲ ನಡೆಸಿಕೊಟ್ಟು ತನ್ನ ಪ್ರತಿಭೆಯನ್ನು ಹೊರಹೊಮ್ಮಿಸಿದಳು. ಪ್ರಣಾಮ್ಯಳಿಗೆ ಸಂಘದ ಅಧ್ಯಕ್ಷರು ಸ್ಮರಣಿಕೆ ನೀಡಿ ಗೌರವಿಸಿದರು. ಬಿ.ಆರ್.ಎಸ್. ವಸತಿ ಗೃಹದ ಸದಸ್ಯೆಯರು ಸಾದರ ಪಡಿಸಿದ ದಾಂಡಿಯ ನೃತ್ಯ ಸೊಗಸಾಗಿ ಮೂಡಿಬಂತು. ಲಘು ಉಪಾಹಾರವನ್ನು ಶ್ರೀ ವಿಶ್ವನಾಥ ಶೆಟ್ಟಿಯವರು ತಯಾರಿಸಿಕೊಟ್ಟರು.

ನಮ್ಮ ಕಚೇರಿ ಸಿಬ್ಬಂದಿ ಹಾಗೂ ಸಂಘದ ಇತರ ಸಿಬ್ಬಂದಿವರ್ಗದ ಸಾಂದರ್ಭಿಕ ಸಹಕಾರಕ್ಕೆ ಶಿರಬಾಗಿ ವಂದಿಸುತ್ತೇನೆ. ಯಾಂತ್ರಿಕ ಬದುಕಿಗೆ ಮಾಂತ್ರಿಕ ಶಕ್ತಿ ನೀಡಿ ದಸರಾ ಹಬ್ಬ ನಮ್ಮೆಲ್ಲರನ್ನೂ ಪಾವನಗೊಳಿಸಿದೆ. ಶ್ರೀಮತಿ ಶೆಟ್ಟಿ ಮತ್ತು ಮಲ್ಲಿಕ ಕೆ. ಶೆಟ್ಟಿಯವರು ಮಂಟಪದ ಹಾಗೂ ದೇವಿ ಅಲಂಕಾರವನ್ನು, ರವಿ ಬಳಗದಿಂದ ಹೂವಿನ ಅಲಂಕಾರ, ಮಹಿಳಾ ವಿಭಾಗದ ಸದಸ್ಯೆಯರ ಸ್ವಚ್ಛತೆ ಬದ್ಧತೆಯೊಂದಿಗೆ ಒಟ್ಟಿನಲ್ಲಿ ನೆನಪಿನ ಅಂಗಳದಲ್ಲಿ ಚಿರಸ್ಥಾಯಿಯಾಗಿ ಉಳಿಯತಕ್ಕಂತಹ ಕಾರ್ಯಕ್ರಮ ನಡೆಯಿತು ಎಂದರೂ ತಪ್ಪಾಗಲಾರದು. ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈಯವರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲಾ ಬಂಧುಗಳಿಗೆ ಧನ್ಯವಾದ ಅರ್ಪಿಸಿದರು. ಶ್ರೀಮತಿ ಗೀತಾಂಜಲಿ ಅಜಿಲರವರು ಕಾರ್ಯಕ್ರಮ ನಿರೂಪಣೆಗೈದರು.

ತನುಮನದೊಂದಿಗೆ ಪ್ರೋತ್ಸಾಹಿಸಿದ:–

1. ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ
2. ಶ್ರೀ ರತ್ನಾಕರ ಹೆಗ್ಡೆ
3. ಶ್ರೀ ಅಮರನಾಥ ಶೆಟ್ಟಿ
4. ಶ್ರೀಮತಿ ಪ್ರೀತಿ ಅರವಿಂದ ಶೆಟ್ಟಿ
5. ಶ್ರೀಮತಿ ಕಲಾವತಿ ಬಿ. ಶೆಟ್ಟಿ
6. ಶ್ರೀಮತಿ ಮಂಜುಳಾ ಶೆಟ್ಟಿ
7. ಶ್ರೀಮತಿ ಜಯಶ್ರೀ ಸಿ. ರೈ
8. ಶ್ರೀಮತಿ ಯೋಗ್ಯ ಎಲ್. ರೈ
9. ಶ್ರೀಮತಿ ಶ್ಯಾಮಲ ಶೆಟ್ಟಿ
10. ಶ್ರೀಮತಿ ಮಾಲಾ ಎ. ಶೆಟ್ಟಿ
11. ಶ್ರೀಮತಿ ಜ್ಯೋತಿ ಎಸ್. ಶೆಟ್ಟಿ
12. ಶ್ರೀಮತಿ ಗೀತಾ ಎ. ಶೆಟ್ಟಿ
13. ಶ್ರೀಮತಿ ಸುಜಾತ ಶೆಟ್ಟಿ
14. ಶ್ರೀಮತಿ ಮಾಲಾ ಬಿ. ಶೆಟ್ಟಿ
15. ಶ್ರೀಮತಿ ಭಾಗ್ಯ ಶೆಟ್ಟಿ



ಒಟ್ಟಿನಲ್ಲಿ ದಸರಾ ಸಂಭ್ರಮದ ಯಶಸ್ಸಿಗೆ ಕಾರಣೀಭೂತರಾದ ಸದಸ್ಯ ಬಾಂಧವರ ಸಮ್ಮಿಲನ ತನು ಮನ ಧನದೊಂದಿಗೆ ಪ್ರೋತ್ಸಾಹಿಸಿದ ಬಂಟ ಬಂಧುಗಳು ಹಾಗೂ ಆಡಳಿತ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಸಿಬ್ಬಂದಿ ವರ್ಗ ಎಲ್ಲರಿಗೂ ಮಹಿಳಾ ವಿಭಾಗ ಆಭಾರಿಯಾಗಿದೆ.

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# ಬಂಟ ಸಮುದಾಯವನ್ನು 2ಎ ಮೀಸಲಾತಿಗೆ ಸೇರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಜಾಗತಿಕ ಬಂಟರ ಸಂಘಗಳ ಒಕ್ಕೂಟ ಮನವಿ



ಬಂಟರ ಸಮುದಾಯವನ್ನು 2ಎ ಮೀಸಲಾತಿಗೆ ಸೇರ್ಪಡೆಗೊಳಿಸಬೇಕು ಎಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿಯನ್ನು ಸಲ್ಲಿಸಿದ್ದಾರೆ.

ಮುಖ್ಯಮಂತ್ರಿಗಳು ಮನವಿಯನ್ನು ಸ್ವೀಕರಿಸಿ ಸಕಾರಾತ್ಮಕ ಬೆಂಬಲವನ್ನು ನೀಡಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂಬ ಭರವಸೆಯನ್ನು ನೀಡಿದರು. ಬಂಟರ ಸಮುದಾಯವು ಮೇಲ್ನೋಟಕ್ಕೆ ಎಲ್ಲವೂ ಸರಿ ಇದೆ ಎಂದು ಕಂಡರೂ ಬಹಳಷ್ಟು ಮಂದಿ ಗ್ರಾಮೀಣ ಪ್ರದೇಶದಲ್ಲಿ ಸೌಲಭ್ಯಗಳಿಂದ ವಂಚಿತರಾಗಿ ಸಂಕಷ್ಟದಲ್ಲಿ ಇದ್ದು ಆರ್ಥಿಕವಾಗಿ ಅಸಮರ್ಥರಾಗಿದ್ದಾರೆ. ಇವರ ಜೀವನ ಸುಧಾರಣೆಗೆ ಮತ್ತು ಶಿಕ್ಷಣ, ಉದ್ಯೋಗ, ಆರ್ಥಿಕ ಸಮಸ್ಯೆಗಳ ನಿವಾರಣೆಗಾಗಿ ಬಂಟ ಸಮುದಾಯವನ್ನು 2ಎ ಗೆ ಸೇರ್ಪಡೆ ಗೊಳಿಸಬೇಕಾದ ಅವಶ್ಯಕತೆ ಇದೆ ಎಂಬ ವಿಚಾರವನ್ನು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ, ಕಾರ್ಯದರ್ಶಿ ಇಂದ್ರಾಳಿ ಜಯಕರ ಶೆಟ್ಟಿ, ಒಕ್ಕೂಟದ ನಿರ್ದೇಶಕರಾದ ಕೆ ಪ್ರಕಾಶ್ ಶೆಟ್ಟಿ, ಮತ್ತು ಸಂತೋಷ್ ಶೆಟ್ಟಿ ಇನ್ನಾ, ಸುರೇಶ್ ಶೆಟ್ಟಿ ಗುರ್ಮೆ ಜೊತೆಯಾಗಿ ಮುಖ್ಯಮಂತ್ರಿಗಳಿಗೆ ವಿಷಯಗಳ ತಿಳುವಳಿಕೆ ಮೂಡಿಸಿದರು. ಈ ಸಂದರ್ಭದಲ್ಲಿ ಸಕಾರಾಮ್ ಶೆಟ್ಟಿ, ಮಟ್ಟಾರ್ ರತ್ನಾಕರ ಹೆಗ್ಡೆ, ಅಶೋಕ್ ಶೆಟ್ಟಿ ಉಪಸ್ಥಿತರಿದ್ದರು.

## *Academic Excellence - Congratulations!*
## *PUC/ 12th Std. Achiever*



**SIDDANTH SHETTY**
S/o. Rohidasa Shetty & Mohini R. Shetty
PUC (Sc.) - 99.83%
Kannada-100, Physics-100, Chemistry-100, Mathematics-100, Electronics-100
KCET-57th Rank ; JEE MAINS- 3511 AIR ; JEE ADVANCE-1699 AIR
KVPY-1053 AIR, City PU College, Bangalore

# *Congratulations*




Badminton Association of India (BAI) conducted the all India Masters Ranking Tournament at Manohar Parrikar indoor stadium Madgoa – Goa. The tournament was conducted from 19th Sep. 2021 to 26th Sep. 2021. This tournament was also a selection for BWF Badminton World Federation – World Seniors Championship in Spain. D. Suresh Hegde participated in the tournament in both Men's singles and Doubles 75+.

D. Suresh Hegde had won the First place in doubles and the third place in singles and was selected for the World Cup to be conducted in Spain.

## ಅಭಿನಂದನೆಗಳು



ಭಾರತೀಯ ವೈಟ್ ಲಿಫ್ಟಿಂಗ್ ಫೆಡರೇಶನ್‌ನ ಜಂಟಿ ಕಾರ್ಯದರ್ಶಿಯಾಗಿ ಸಂಘದ ಸಕ್ರಿಯ ಸದಸ್ಯೆ ಶ್ರೀಮತಿ ಶ್ಯಾಮಲ ಶೆಟ್ಟಿಯವರು ಆಯ್ಕೆಯಾಗಿರುತ್ತಾರೆ. ಪ್ರಸ್ತುತ ಕರ್ನಾಟಕ ವೈಟ್ ಲಿಫ್ಟಿಂಗ್ ಅಸೋಸಿಯೇಶನ್‌ನ ಖಜಾಂಚಿಯಾಗಿರುವ ಇವರು ಕರ್ನಾಟಕ ಸರಕಾರದಿಂದ ಏಕಲವ್ಯ ಪ್ರಶಸ್ತಿ ಹಾಗೂ ಜೀವನ ಪರ್ಯಂತ ಸಾಧನೆ ಪ್ರಶಸ್ತಿ ಗಳಿಸಿರುತ್ತಾರೆ. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# ಬೆಂಗಳೂರು ಬಂಟರ ಸಂಘದ ಯಕ್ಷ ಗುರುವಿಗೆ ನಾಡಹಬ್ಬ ದಸರಾ ಉದ್ಘಾಟನೆಯ ಸೌಭಾಗ್ಯ



ಬೇಗಾರ್ ಶಿವಕುಮಾರ್–ಈ ಹೆಸರು ನಮ್ಮ ಸಮಾಜಕ್ಕೆ ಚಿರಪರಿಚಿತ. ಕಾರಣ ಸುಮಾರು 13 ವರ್ಷಗಳಿಂದ ನಮ್ಮ ಸಂಘದಲ್ಲಿ ಯಕ್ಷಗುರುವಾಗಿ ಮಕ್ಕಳಿಗೆ, ಮಹಿಳೆಯರಿಗೆ ನಿರಂತರ ತರಗತಿ ನಡೆಸುತ್ತಾ ಯಕ್ಷಗಾನ ಸಮಿತಿಯ ಸದಸ್ಯರಿಗೆ ಪ್ರಸಂಗದ ಮಾರ್ಗದರ್ಶನ ಮಾಡುತ್ತಾ ಹಲವಾರು ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದ್ದಾರೆ. ಸುಮಾರು 40 ವರ್ಷಗಳ ಹಿಂದೆ ಕೋಟ ಶಿವರಾಮ ಕಾರಂತರಿಂದ ಯಕ್ಷಗಾನಕ್ಕೆ ಆಯ್ಕೆಯಾಗಿ ಉಡುಪಿ ಕುಂಜಿ ಬೆಟ್ಟಿನ ಯಕ್ಷಗಾನ ಕಲಾಕೇಂದ್ರದಲ್ಲಿ ಯಕ್ಷಗಾನ ಕಲಿತು ಮೂಲ್ಕಿ, ಕಮಲಶಿಲೆ, ಅಮೃತೇಶ್ವರಿ, ಸೌಕೂರು ಮೇಳದಲ್ಲಿ 8 ವರುಷ ಬಡಗು ತಿಟ್ಟಿನ ತಿರುಗಾಟ ನಡೆಸಿ, ಅಲ್ಲಿಂದ ಶ್ರೀಕ್ಷೇತ್ರ ಧರ್ಮಸ್ಥಳ ಮೇಳದಲ್ಲಿ 12 ವರ್ಷ ಪ್ರಧಾನ ಸ್ತ್ರೀಪಾತ್ರ ದಾರಿಯಾಗಿ ಎಳಮೆಯಲ್ಲಿಯೆ ಉತ್ತಮ ಕಲಾವಿದ ಎಂಬ ಹೆಸರುಗಳಿಸಿದ್ದರು.

ಬಾಳಿನ ಬದಲಾವಣೆಯೋ ಎಂಬಂತೆ 19 ವರ್ಷಗಳ ಹಿಂದೆ ರಾಜಧಾನಿ ಬೆಂಗಳೂರಿಗೆ ಬಂದು ಗಾನ ಸೌರಭ ಯಕ್ಷಗಾನ ಶಾಲೆಯನ್ನು ಆರಂಭಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಹಲವಾರು ಕಡೆ ಕಲೆಯನ್ನು ಧಾರೆಯೆರೆದವರು. ಹಲವಾರು ಪ್ರಶಸ್ತಿ ಪುರಸ್ಕಾರಗಳು ಇವರನ್ನು ಅರಸಿ ಬಂದಿವೆ. ಇವರ ಕಲಾಬದುಕಿಗೆ ಯಶಸ್ಸಿನ ಕಿರೀಟವೊ ಎಂಬಂತೆ ಕರ್ನಾಟಕ ರಾಜ್ಯದ 2ನೇ ದಸರಾ ಮಹೋತ್ಸವ ಎಂಬ ಖ್ಯಾತಿಗೆ ಒಳಗಾದ ಶಿವಮೊಗ್ಗ ಜಿಲ್ಲಾ ದಸರಾ ಉದ್ಘಾಟನೆ ಸೌಭಾಗ್ಯ. ದೇವಿಯ ಹಾಗೂ ಕಲಾಸೇವೆ ಹಾಗೂ ಸಾವಿರಾರು ವಿದ್ಯಾರ್ಥಿಗಳಿಗೆ ಕಲೆಯನ್ನು ಬೋಧಿಸಿದ ಪುಣ್ಯದ ಫಲವಾಗಿ ಯಕ್ಷಗಾನದ ಇತಿಹಾಸದಲ್ಲೇ ಬೇಗಾರರಿಗೆ ಮೊದಲು ಸಂದ ಗೌರವ ಇದಾಗಿದೆ. ನಮ್ಮ ಸಂಘದ ಯಕ್ಷಗಾನ ಗುರುಗಳಿಗೆ ನಮ್ಮ ಸಮಾಜ ಹಾಗೂ ಸಂಘದ ಪರವಾಗಿ ಶುಭವನ್ನು ಕೋರುತ್ತಿದ್ದೇವೆ.



# ಅಭಿನಂದನೆಗಳು

## ಡಾ. ಮಾಲತಿ ಶೆಟ್ಟಿ ಮಾಣೂರು ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ

"ಅಮೃತ ಪ್ರಕಾಶ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ, ಸಾಹಿತಿ, ಸಮಾಜ ಸೇವಕಿ, ಮಾಲತಿ ಶೆಟ್ಟಿ ಮಾಣೂರು ಅವರು ಬೆಂಗಳೂರಿನ ಜನತಾ ಸಮಾಜ ಸೇವಾ ಟ್ರಸ್ಟ್ (ರಿ) ಪದ್ಮಭೂಷಣ ಡಾ. ಎ.ಪಿ.ಜೆ ಅಬ್ದುಲ್ ಕಲಾಂರವರ 90ನೇ ಜನ್ಮದಿನಾಚರಣೆಯ ಅಂಗವಾಗಿ ನೀಡುವ ಪದ್ಮಭೂಷಣ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರದ ಸಾಧನೆಗಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರು ಬಂಟರ ಸಂಘದ ಪರವಾಗಿ ಇವರಿಗೆ ಅಭಿನಂದನೆಗಳು.

# ಶ್ರದ್ಧಾಂಜಲಿ



**ಶ್ರೀ ನಾರಾಯಣ ಹೆಗ್ಡೆ ಕೊಳ್ಕೆಬೈಲ್**
ಸದಸ್ಯತ್ವ ಸಂಖ್ಯೆ: LM001350

ಕೊಳ್ಕೆಬೈಲ್ ಶ್ರೀ ನಾರಾಯಣ ಹೆಗ್ಡೆಯವರು ದಿನಾಂಕ 06.10.2021ರಂದು ತಮ್ಮ 78ನೇ ವಯಸ್ಸಿನಲ್ಲಿ ನಿಧನರಾದರು. ಕರ್ನಾಟಕ ಪವರ್ ಕಾರ್ಪರೇಷನ್‌ನಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ (ನಿವೃತ್ತ) ಆಗಿ ಸೇವೆ ಸಲ್ಲಿಸಿದ ಇವರು ತಮ್ಮ ಪತ್ನಿ ಬ್ರಹ್ಮಾವರ ತೆಂಕುಮನೆ ಶ್ರೀಮತಿ ಅನಿತ ಹೆಗ್ಡೆ, ಇಬ್ಬರು ಪುತ್ರರು, ಇಬ್ಬರು ಸಹೋದರರು, ಓರ್ವ ಸಹೋದರಿ, ಇಬ್ಬರು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ವಿಜಯಾ ಬ್ಯಾಂಕ್‌ನ ನಿವೃತ್ತ ಮುಖ್ಯ ವ್ಯವಸ್ಥಾಪಕ ಪಾವೂರುಗುತ್ತು ಶ್ರೀ ಎಂ.ಪಿ. ದೇವದಾಸ್ ಶೆಟ್ಟಿಯವರು ದಿನಾಂಕ 05.10.2021ರಂದು ತಮ್ಮ 80ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಅಡೇಕಲ ಶ್ರೀಮತಿ ಶ್ರೀದೇವಿ ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ನಾಲ್ವರು ಸಹೋದರರು, ಇಬ್ಬರು ಸಹೋದರಿಯರು, ನಾಲ್ವರು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ದೇವದಾಸ್ ಶೆಟ್ಟಿ ಎಂ.ಪಿ.**
ಸದಸ್ಯತ್ವ ಸಂಖ್ಯೆ: CL001944



**ಶ್ರೀಮತಿ ಅನುಪಮ ಹೆಗ್ಡೆ ಕೆ.**
ಸದಸ್ಯತ್ವ ಸಂಖ್ಯೆ: CL003742

ಬಡಿಲಗುತ್ತು ಶ್ರೀಮತಿ ಕೆ. ಅನುಪಮ ಹೆಗ್ಡೆಯವರು ದಿನಾಂಕ 16.10.2021ರಂದು ತಮ್ಮ 48ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಾಯಿ, ತಮ್ಮ ಪತಿ ಮುಂಡಡ್ಕಗುತ್ತು ಶ್ರೀ ಕರುಣಾಕರ ಹೆಗ್ಡೆ, ಓರ್ವ ಪುತ್ರ, ಓರ್ವ ಪುತ್ರಿ, ಓರ್ವ ಸಹೋದರ, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಬಿಲ್ಲಾಡಿ ಶ್ರೀ ಬಸವರಾಜ್ ಶೆಟ್ಟಿಯವರು ದಿನಾಂಕ 19.10.2021ರಂದು ತಮ್ಮ 56ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಹೋಟೆಲ್ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಕೋಡೂರು ಶ್ರೀಮತಿ ಶ್ರೀಮತಿ ಬಿ. ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಸಹೋದರರು, ಮೂವರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಬಸವರಾಜ್ ಶೆಟ್ಟಿ ಬಿ.**
ಸದಸ್ಯತ್ವ ಸಂಖ್ಯೆ: CL004276



**ಶ್ರೀಮತಿ ಹೇಮಲತಾ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL002737

ಮೊಳಹಳ್ಳಿ ಶ್ರೀಮತಿ ಹೇಮಲತಾ ಶೆಟ್ಟಿಯವರು ದಿನಾಂಕ 21.10.2021ರಂದು ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಮೇಜರ್ ಜನರಲ್ ಡಾ. ಜಯಕರ ಶೆಟ್ಟಿ, ಓರ್ವ ಪುತ್ರಿ, ಓರ್ವ ಪುತ್ರ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು, ನಾಲ್ವರು ಮೊಮ್ಮಕ್ಕಳು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.




**ಶ್ರೀ ಜಗದೀಶ್ ಶೆಟ್ಟಿ ಎ.**
ಸದಸ್ಯತ್ವ ಸಂಖ್ಯೆ: CL002656

ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಉದ್ಯೋಗಿ ಕುತ್ಯಾರು ಅಂಜಾರುಮನೆ ಶ್ರೀ ಎ. ಜಗದೀಶ್ ಶೆಟ್ಟಿಯವರು ದಿನಾಂಕ 21.10.2021ರಂದು ತಮ್ಮ 67ನೇ ವಯಸ್ಸಿನಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಓರ್ವ ಪುತ್ರಿ, ಓರ್ವ ಸಹೋದರಿ, ಏಳು ಜನ ಸಹೋದರರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಕರುಣಾಕರ ಶೆಟ್ಟಿ ಎನ್.**
ಸದಸ್ಯತ್ವ ಸಂಖ್ಯೆ: CL009411

ಬೆಳ್ವಾಲ ಮೇಲ್‌ನೂಜು ಕೂಡಲುಮನೆ ಶ್ರೀ ಎನ್. ಕರುಣಾಕರ ಶೆಟ್ಟಿಯವರು ದಿನಾಂಕ 17.10.2021ರಂದು ತಮ್ಮ 44ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಎರುಕೋಣ ಶ್ರೀಮತಿ ಪ್ರೇಮ ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಐವರು ಸಹೋದರರು, ಓರ್ವ ಸಹೋದರಿ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ದಿನಕರ್ ಶೆಟ್ಟಿ ಮೊಗೆಬೆಟ್ಟು**
ಸದಸ್ಯತ್ವ ಸಂಖ್ಯೆ: CL005612

ಕಡ್ರಿ ಶ್ರೀ ಗೋವಿಂದ ಶೆಟ್ಟಿ ಮತ್ತು ಮೊಗೆಬೆಟ್ಟು ಶ್ರೀಮತಿ ಪ್ರೇಮಾವತಿ ಜಿ. ಶೆಟ್ಟಿಯವರು ಪುತ್ರ ಮೊಗೆಬೆಟ್ಟು ಶ್ರೀ ಕೆ. ದಿನಕರ್ ಶೆಟ್ಟಿಯವರು ದಿನಾಂಕ 11.10.2021ರಂದು ತಮ್ಮ 58ನೇ ವಯಸ್ಸಿನಲ್ಲಿ ನಿಧನರಾದರು. ಶಿವಮೊಗ್ಗದಲ್ಲಿ ಪಿ.ಡಬ್ಲ್ಯು.ಡಿ ಗುತ್ತಿಗೆದಾರರಾಗಿ ವೃತ್ತಿ ಜೀವನವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಕೂಕನಾಡು ಶ್ರೀಮತಿ ವೀಣಾ ಡಿ. ಶೆಟ್ಟಿ, ಇಬ್ಬರು ಪುತ್ರರು, ಆರು ಜನ ಸಹೋದರರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಹೆಚ್. ಸಂದೇಶ್ ಹೆಗ್ಡೆ**
ಸದಸ್ಯತ್ವ ಸಂಖ್ಯೆ: CL005839

ಕುಕ್ಕೆಹಳ್ಳಿ ಶ್ರೀ ಕೆ. ದಿವಾಕರ್ ಹೆಗ್ಡೆ ಮತ್ತು ಹೆಬ್ರಿಬೀಡು ಶ್ರೀಮತಿ ಶ್ಯಾಮಲ ಹೆಗ್ಡೆಯವರ ಪುತ್ರ ಹೆಬ್ರಿಬೀಡು ಶ್ರೀ ಸಂದೇಶ್ ಹೆಗ್ಡೆಯವರು ದಿನಾಂಕ 23.10.2021ರಂದು ತಮ್ಮ 53ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ತಂದೆ, ತಾಯಿ, ಪತ್ನಿ ಕೊಡ್ಲಮೊಗರು ಆಸ್ಮಾ ಹೆಗ್ಡೆ, ಓರ್ವ ಪುತ್ರಿ, ಓರ್ವ ಸಹೋದರಿ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.


Creating life-long bonds
Since 18 Years
HOME FOR ALL
AVAIL THE BENEFITS OF
PMAY
Interest Subsidy Upto ₹ 2.67 lakh*
*Conditions Apply
PRADHAN MANTRI AWAS YOJANA
RERA Approved
SAI MATHA GARDEN
Surathkal, Mangaluru.
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
Just pay ₹ 50 K to book your dream home
Budget flats 18 Lakhs Onwards
NEAR TO BEACH & RAILWAY STATION
International Airport Road, Surathkal
MATHA Jyothi Residency
NH - 66, Mukka
MATHA Sushiganga Residency, Mulky
NH - 66, Mulky
On Going Project in Padubidri
Project Approved in all Nationalized Bank
MATHA Builders & Developers
Developers Pvt. Ltd.
Surathkal: Thara Towers, 2nd Floor, International Airport Road, Surathkal, Mangaluru - 575 014.
Mumbai: Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.
7022481666
9980711966
mathadevelopers108@gmail.com
www.mathadevelopers.com
CREDAI
7259209966
7259269966 (Mumbai)
Best Investment with Assured Rental Return

ADVT.

# SHRADDHANJALI



## Molahalli Hemalatha J. Shetty

D/o Late Kidiyoor Tejappa Shetty and Late Molahalli Rukmini Vishalakshi Shetty
W/o Major General Dr. K. Jayakar Shetty

Exp: on 20th October 2021 in Washington DC

Your life was a blessing, your memory a treasure you are
loved beyond words and missed beyond measures.

Mrs. Indira M Shetty (Sister)
Mrs. Saroja bhandary (Sister)
Major general Dr. Jayakar Shetty (Husband)
Dr. Kirti Shetty (Daughter)
Dr. M. Shantharam Shetty (Brother)
Mr. Sakaram Shetty (Brother)
Dr. Sudhir Shetty (Son)

Grand children, Kidiyoor Badagu Mane and
Thenku Mane Family and Friends

ADVT.

# BUNTS' SANGHA BANGALORE

No.324, Chord Road, Vijayanagar, Bangalore – 560 040
Tel: 080-23399323 / 23399635 / 23399636

## APPLICATION FOR ENDOWMENT AWARD
## ದತ್ತಿ ನಿಧಿ ಪ್ರಶಸ್ತಿಗೆ ಅರ್ಜಿ

Applicant Photo

To,
The Hon. Secretary
Bunts' Sangha Bangalore

Sir/ ಮಾನ್ಯರೇ,

IWe request you to consider my application for Endowment Award/ ದತ್ತಿ ನಿಧಿ ಪ್ರಶಸ್ತಿಗೆ ನನ್ನ ಅರ್ಜಿಯನ್ನು ಪರಿಗಣಿಸಲು ಮನವಿ.

1. Name of the Applicant :
2. Date of Birth of the Applicant :
3. Contact No. :
4. Father's Name :
5. Mother's Name :
6. Address :
7. Details of Education qualification of the Applicant :

Name of the Award applied for :

Achievements :

| | |
|---|---|
| Details of Applicants Bank A/c / ಅಭ್ಯರ್ಥಿಯ ಬ್ಯಾಂಕ್ ಖಾತೆಯ ವಿವರಗಳು | A/c Holders Name / ಖಾತೆದಾರರ ಹೆಸರು |
| | A/c No. ಖಾತೆ ಸಂಖ್ಯೆ |
| | Name of the Bank / ಬ್ಯಾಂಕ್ ನ ಹೆಸರು |
| | Branch / ಶಾಖೆ |
| | IFSC Code / ಐಫ್.ಎಸ್.ಸಿ. ಕೋಡ್ |

Signature of the Applicant
ಅಭ್ಯರ್ಥಿಯ ಸಹಿ

Date :

**FOR OFFICE USE**

Chairman,
Scholarship & Awards Committee

ಸ್ಥಾಪನೆ : 1997

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

# Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040. ದೂರವಾಣಿ: 23393444 ಮೊಬೈಲ್ : 8722006082
E-mail: vijaya_souharda@yahoo.in, vijayasouharda@rediffmail.com

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. 25ರ ರಜತ ಸಂಭ್ರಮಕ್ಕೆ ಕಾಲಿಡುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000/–
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು – 13%**

**2016–17 ರಿಂದ ಕ್ರಮವಾಗಿ 15% ವಾರ್ಷಿಕ ಡಿವಿಡೆಂಡ್ ವಿತರಣೆ**
**ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ**

**ವ್ಯವಹಾರದ ವೇಳೆ**

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

ಅಪೆಕ್ಸ್ ಬ್ಯಾಂಕ್‌ನ ಎಲ್ಲಾ ರಜೆಗಳೂ (ವಾರದ ರಜಾ ಹೊರತು ಪಡಿಸಿ) ಅನ್ವಯಿಸುತ್ತವೆ.

ನಿರ್ದೇಶಕರುಗಳು :

ಶ್ರೀ ಕೆ. ಭಗವಾನ್ ದಾಸ್ ರೈ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಸ್ಥಾಪಕ ಅಧ್ಯಕ್ಷರು : ದಿ॥ ಡಾ॥ ಐ.ವಿ. ಶೆಟ್ಟಿ – 1997
ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಉಪಾಧ್ಯಕ್ಷರು

ADVT




ಸಮುದಾಯ ಬಾಂಧವರೇ

ಮುಂಬರುವ ಬಂಟರ ಸಂಘದ ಆಡಳಿತ ಮಂಡಳಿಗೆ

ನಡೆಯುವ ಚುನಾವಣೆಯಲ್ಲಿ **ಖಜಾಂಚಿ** ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು

ತಮ್ಮೆಲ್ಲರ ಸಹಕಾರವನ್ನು ಬಯಸುವ

ಇಂತಿ ನಿಮ್ಮವ

**ಅಮರನಾಥ್ ಶೆಟ್ಟಿ ಎಚ್.**

ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ
2014-16 ಮತ್ತು 2016-2018

ಡೈರೆಕ್ಟರ್ - ಸ್ಮಾರ್ಟ್ ಲೈನರ್ ಇಂಡಿಯಾ ಪ್ರೈ. ಲಿ.,

ಮೊ : 98440 72857

ADVT.




**REGISTERED KA/BGW-1589/2021-2023 RNI NO: KARBIL/2005/16402, Date of publication 07.11.2021**
**Licenced post without prepayment License No. WPP-219, Total No. of page 44+4=48**
Licenced to post at Bangalore PSO, Mysore Road, Bengaluru-560026, on 10th or 12th of every Month



ಸಮುದಾಯ ಬಾಂಧವರೇ
ನಾನು ಬಂಟರ ಸಂಘದ ಮುಂಬರುವ ಆಡಳಿತ ಮಂಡಳಿಗೆ
ನಡೆಯುವ ಚುನಾವಣೆಯಲ್ಲಿ
ಗೌ॥ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು
ತಮ್ಮೆಲ್ಲರ ಸಹಕಾರವನ್ನು ಬಯಸುತ್ತಿದ್ದೇನೆ.

ಇಂತಿ ನಿಮ್ಮವ
ಆನಂದರಾಮ ಶೆಟ್ಟಿ ಬಿ.
ಮಾಜಿ ಖಜಾಂಚಿ, 2016-2018
ಮೊ : 94480 58564

Cave-n-Dine
Fine Dine Family Restaurant
POORNIMA SCREENS
Cave-n-Dine E cavendine@yahoo.com

First of its kind restaurant in Bengaluru... in a Cave Setting...

Delicious Cuisine
Memorable Ambience



Grand Entry


Add on Fine Dining


Spacious Banquet Hall


Outdoor Catering



Cave-n-Dine Fine Dine Family Restaurant

#12, 4th Stage, 3rd Block, Basaveshwaranagar, Bengaluru 560079
Cave-n-Dine E cavendine@yahoo.com

For table reservations, please call
9632991122 / 9632994411


Upendra Shetty
Managing Director


Anandram Shetty B
Director

www.cavendine.com

ADVT

Printed and Published by : Sri Madhukar M. Shetty on Behalf of Bunts' Sangha Bangalore
#324, Bunts' Sangha Complex, Chord Road, Vijayanagar, Bengaluru - 560 040. Editor : M. Muralidhara Hegde
Printed at Sairam Printers, Vijayanagar, Bengaluru - 560 040. Mob : 9845630847